सत्यमेव जयते

# ಲೆಕ್ಕ ಪತ್ರ – ಒಂದು ವಿಹಂಗಮ ನೋಟ
# 2013 – 14

## ಕರ್ನಾಟಕ ಸರ್ಕಾರ

## ಪ್ರಸ್ತಾವನೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾನಿಯಮಗಳು) ಅಧಿನಿಯಮ 1971ರ ಅಧಿಕಾರದನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕ ಪತ್ರಗಳನ್ನು ರಾಜ್ಯದ ವಿಧಾನಮಂಡಲದಲ್ಲಿ ಸಾದರ ಪಡಿಸುವ ಸಲುವಾಗಿ ತಯಾರಿಸಿ, ಪರೀಕ್ಷಿಸಲಾಗುವುದು. ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕಗಳು (ಅ) ಹಣಕಾಸು ಲೆಕ್ಕಗಳು ಮತ್ತು (ಆ) ಧನ ವಿನಿಯೋಗ ಲೆಕ್ಕಗಳನ್ನು ಒಳಗೊಂಡಿರುತ್ತದೆ.

ಹಣಕಾಸು ಲೆಕ್ಕಗಳು ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳ ಸಾರಾಂಶದ ವಿವರಣಾಪಟ್ಟಿಗಳನ್ನು ಒಳಗೊಂಡಿರುತ್ತದೆ. ಧನವಿನಿಯೋಗ ಲೆಕ್ಕಗಳು ರಾಜ್ಯ ವಿಧಾನಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ವೆಚ್ಚಗಳ ಮೊತ್ತವನ್ನು ದಾಖಲಿಸುತ್ತದೆ ಮತ್ತು ಅವಕಾಶ ಒದಗಿಸಿದ ಮೊತ್ತಗಳಿಗೂ ಮತ್ತು ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಗಳಿಗೆ ವಿವರಣೆಯನ್ನು ನೀಡುತ್ತದೆ.

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ರಾಜ್ಯದ ಹಣಕಾಸು ಲೆಕ್ಕ ಮತ್ತು ಧನ ವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು, ಧನವಿನಿಯೋಗ ಲೆಕ್ಕಗಳು, ರಾಜ್ಯದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿ ಮತ್ತು ಲೆಕ್ಕ ಪತ್ರ– ಒಂದು ವಿಹಂಗಮ ನೋಟ–ಇವುಗಳ ಒಟ್ಟು ಓದುವಿಕೆಯು / ಕರ್ನಾಟಕ ಸರ್ಕಾರದ ಹಣಕಾಸು ವಹಿವಾಟಿನ ವಿವಿಧ ಮುಖಗಳ ಪರಿಣಾಮಕಾರಿ ಗ್ರಹಿಕೆಗೆ ಸಹಾಯ ಮಾಡುತ್ತದೆ. "ಲೆಕ್ಕಪತ್ರ – ಒಂದು ವಿಹಂಗಮ ನೋಟ"ವು ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳಲ್ಲಿ ಬಿಂಬಿತವಾಗಿರುವಂತೆ ರಾಜ್ಯ ಸರ್ಕಾರದ ಚಟುವಟಿಕೆಗಳ ಒಂದು ಸ್ಥೂಲನೋಟವನ್ನು ನೀಡುತ್ತದೆ. ಈ ಮಾಹಿತಿಯನ್ನು ಸಂಕ್ಷಿಪ್ತ ವಿವರಣೆಗಳು, ಕೋಷ್ಟಕಗಳು ಮತ್ತು ನಕ್ಷೆಗಳ ಮೂಲಕ ವಿಶದಪಡಿಸಲಾಗಿದೆ.

ಈ ಪ್ರಕಟಣೆಯನ್ನು ಉತ್ತಮಗೊಳಿಸುವ ದಿಶೆಯಲ್ಲಿ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವಿದೆ.

**(ವಿ. ಕುರಿಯನ್)**

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ)

ಕರ್ನಾಟಕ

ಸ್ಥಳ : ಬೆಂಗಳೂರು

ದಿನಾಂಕ : 13 ಮಾರ್ಚ 2015

# ಪರಿವಿಡಿ


| ಅಧ್ಯಾಯ–1 | ಪಕ್ಷಿ ನೋಟ | ಪುಟ |
|---|---|---|
| **1.1** | **ಪೀಠಿಕೆ** | 1 |
| **1.2** | **ಲೆಕ್ಕಗಳ ವಿನ್ಯಾಸ** | 1 |
| 1.2.1 | ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ಇಡಲಾಗುತ್ತದೆ | 1 |
| 1.2.2 | ಲೆಕ್ಕಗಳ ಸಂಕಲನ | 2 |
| **1.3** | **ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು** | 2 |
| 1.3.1 | ಹಣಕಾಸು ಲೆಕ್ಕಗಳು | 2 |
| 1.3.2 | ಧನಿವಿನಿಯೋಗ ಲೆಕ್ಕಗಳು | 3 |
| **1.4** | **ನಿಧಿಗಳ ಆಕರಗಳು ಮತ್ತು ಅನ್ವಯಗಳು** | 4 |
| 1.4.1 | ಅರ್ಥೋಪಾಯ ಮುಂಗಡಗಳು | 4 |
| 1.4.2 | ನಿಧಿಗಳ ಹರಿವಿನ ವಿವರಣಾ ಪಟ್ಟಿ | 4 |
| 1.4.3 | ರೂಪಾಯಿ ಎಲ್ಲಿಂದ ಬಂತು | 5 |
| 1.4.4 | ರೂಪಾಯಿ ಎಲ್ಲಿಗೆ ಹೋಯಿತು | 5 |
| **1.5** | **ಲೆಕ್ಕಗಳ ಮುಖ್ಯಾಂಶಗಳು** | 6 |
| **1.6** | **ಕೊರತೆ ಮತ್ತು ಹೆಚ್ಚಳಗಳು ಏನನ್ನು ಸೂಚಿಸುತ್ತವೆ ?** | 7 |
| 1.6.1 | ರಾಜಸ್ವ ಹೆಚ್ಚಳ / ಕೊರತೆಗಳ ಪ್ರವೃತ್ತಿ | 7 |
| 1.6.2 | ವಿತ್ತೀಯ ಕೊರತೆಗಳ ಪ್ರವೃತ್ತಿ | 8 |
| 1.6.3 | ಸರ್ಕಾರದ ಲೆಕ್ಕಪತ್ರಗಳು | 9 |
| 1.6.4 | ಸಾಲದ ಮೊತ್ತಗಳಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ | 9 |
| **ಅಧ್ಯಾಯ–2** | **ಸ್ವೀಕೃತಿಗಳು** | |
| **2.1** | **ಪೀಠಿಕೆ** | 10 |
| **2.2** | **ರಾಜಸ್ವ ಸ್ವೀಕೃತಿಗಳು** | 10 |
| 2.2.1 | ರಾಜಸ್ವ ಸ್ವೀಕೃತಿಗಳ ಭಾಗಗಳು | 11 |
| 2.2.2 | ಆದಾಯದ ಪ್ರಮುಖ ಮೂಲಗಳು | 11 |
| **2.3** | **ಸ್ವೀಕೃತಿಗಳ ಪ್ರವೃತ್ತಿ** | 12 |
| 2.3.1 | ತೆರಿಗೆ ರಾಜಸ್ವದ ಭಾಗಗಳು | 13 |
| **2.4** | **ರಾಜ್ಯದ ಸ್ವಂತ ತೆರಿಗೆ ಸಂಗ್ರಹದ ನಿರ್ವಹಣೆ** | 14 |
| **2.5** | **ತೆರಿಗೆ ಸಂಗ್ರಹದ ದಕ್ಷತೆ** | 14 |
| **2.6** | **ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲಿನ ಪ್ರವೃತ್ತಿ** | 15 |
| **2.7** | **ಸಹಾಯಾನುದಾನ ಮತ್ತು ವಂತಿಗೆಗಳು** | 15 |
| **2.8** | **ಸಾರ್ವಜನಿಕ ಋಣ** | 16 |
| **ಅಧ್ಯಾಯ–3** | **ವೆಚ್ಚಗಳು** | |
| **3.1** | **ಪೀಠಿಕೆ** | 17 |
| **3.2** | **ರಾಜಸ್ವ ವೆಚ್ಚ** | 17 |
| 3.2.1 | ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ | 17 |
| 3.2.2 | ರಾಜಸ್ವ ವೆಚ್ಚದ ಪ್ರವೃತ್ತಿ | 18 |
| 3.2.3 | ವೆಚ್ಚದ ಪ್ರಮುಖ ವಿಭಾಗಗಳು | 18 |
| **3.3** | **ಬಂಡವಾಳ ವೆಚ್ಚ** | 19 |
| 3.3.1 | ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ | 20 |
| 3.3.2 | ಬಂಡವಾಳ ವೆಚ್ಚದ ಪ್ರವೃತ್ತಿ | 20 |

# ಪರಿವಿಡಿ


| | | |
|---|---|---|
| **ಅಧ್ಯಾಯ–4** | **ಯೋಜನೆ ಮತ್ತು ಯೋಜನೇತರ ವೆಚ್ಚ** | |
| **4.1** | **ವೆಚ್ಚದ ಹಂಚಿಕೆ** | 21 |
| **4.2** | **ಯೋಜನಾ ವೆಚ್ಚ** | 21 |
| 4.2.1. | ಬಂಡವಾಳ ಲೆಕ್ಕದಡಿ ಯೋಜನಾ ವೆಚ್ಚ | 22 |
| **4.3** | **ಯೋಜನೇತರ ವೆಚ್ಚ** | 22 |
| **4.4** | **ಬದ್ಧ ವೆಚ್ಚ** | 23 |
| **ಅಧ್ಯಾಯ–5** | **ಧನ ವಿನಿಯೋಗ ಲೆಕ್ಕಗಳು** | |
| **5.1** | **ಧನ ವಿನಿಯೋಗ ಲೆಕ್ಕಗಳ ಸಾರಾಂಶ** | 24 |
| 5.1.1 | ಉಳಿತಾಯ/ ಹೆಚ್ಚಳಗಳ ಅನುದಾನವಾರು ವಿವರಗಳು | 24 |
| **5.2** | **ಉಳಿತಾಯ ಪ್ರವೃತ್ತಿ** | 25 |
| **5.3** | **ಗಣನಾರ್ಹ ಉಳಿತಾಯಗಳು** | 27 |
| **5.4** | **ಪೂರಕ ಅಂದಾಜುಗಳು** | 27 |
| **ಅಧ್ಯಾಯ–6** | **ಆಸ್ತಿ ಮತ್ತು ಜವಾಬ್ದಾರಿಗಳು** | |
| **6.1** | **ಆಸ್ತಿಗಳು** | 29 |
| **6.2** | **ಋಣ ಮತ್ತು ಜವಾಬ್ದಾರಿಗಳು** | 29 |
| 6.2.1 | ರಾಜ್ಯ ಭವಿಷ್ಯ ನಿಧಿಗಳು | 30 |
| 6.2.2 | ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ | 30 |
| 6.2.3 | ಸಾದಿಲ್ವಾರು ನಿಧಿ | 31 |
| **6.3** | **ಖಾತರಿಗಳು** | 31 |
| **6.4** | **ಬಾಹ್ಯ ಬೆಂಬಲಿತ ಯೋಜನೆಗಳು** | 32 |
| **ಅಧ್ಯಾಯ–7** | **ಇತರೆ ವಿಷಯಗಳು** | |
| **7.1** | **ಆಂತರಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು** | 33 |
| **7.2** | **ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು** | 33 |
| **7.3** | **ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ** | 33 |
| 7.3.1 | ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ | 33 |
| **7.4** | **ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು** | 34 |
| **7.5** | **ಲೆಕ್ಕಗಳ ಹೊಂದಾಣಿಕೆ** | 34 |
| **7.6** | **ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ** | 34 |
| 7.6.1 | ಸರ್ವತ್ರಿಕ ಒಳಶೀರ್ಷಿಕೆ 800–ಇತರೆ ಸ್ವೀಕೃತಿಗಳು/ ಇತರೆ ವೆಚ್ಚಗಳಡಿ ಇಲಾಖಾ ಸ್ವೀಕೃತಿಗಳು ಮತ್ತು ವಿತರಣೆಗಳ ವರ್ಗೀಕರಣ | 34 |
| **7.7** | **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು** | 35 |
| **7.8** | **ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು** | 35 |

## ಅಧ್ಯಾಯ – 1

### ಪಕ್ಷಿನೋಟ

### 1.1 ಪೀಠಿಕೆ

ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕರ್ನಾಟಕ ಇವರು ಕರ್ನಾಟಕ ರಾಜ್ಯ ಸರ್ಕಾರದ ಸ್ವೀಕೃತಿ ಮತ್ತು ವಿತರಣೆಗಳ ಲೆಕ್ಕವನ್ನು ಸಂಕಲಿಸುತ್ತಾರೆ. ಈ ಸಂಕಲನವು, ಜಿಲ್ಲಾ ಖಜಾನೆಗಳು ಸಲ್ಲಿಸಿದ ಆರಂಭಿಕ ಲೆಕ್ಕಗಳು, ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳು, ಇತರ ಲೆಕ್ಕ ಸಲ್ಲಿಸುವ ಕಛೇರಿಗಳು ಸಲ್ಲಿಸಿದ ಲೆಕ್ಕಗಳು ಮತ್ತು ಭಾರತೀಯ ರಿಜರ್ವ್ ಬ್ಯಾಂಕ್, ಕೇಂದ್ರೀಯ ಲೆಕ್ಕ ವಿಭಾಗ, ನಾಗಪುರ, ಇವರು ನೀಡಿದ ಸೂಚನೆಗಳು ಮತ್ತು ಕಾಲ ಕಾಲಕ್ಕೆ ಕರ್ನಾಟಕ ಸರ್ಕಾರವು ಹೊರಡಿಸಿದ ನಗದು ಹೊರಹರಿವು ಇಲ್ಲದ ಆದೇಶಗಳನ್ನು ಆಧರಿಸಿದೆ. ಈ ಸಂಕನಲದ ನಂತರ ಪ್ರಧಾನ ಮಹಾಲೇಖಪಾಲರು, ಪ್ರತಿವರ್ಷ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ. ಇವುಗಳನ್ನು ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ಸೇವೆಗಳ ಲೆಕ್ಕ ಪರಿಶೋಧನೆ), ಕರ್ನಾಟಕ, ಇವರ ಲೆಕ್ಕ ಪರಿಶೋಧನೆ ಮತ್ತು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ಧೃಡೀಕರಣದ ನಂತರ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಗುವುದು.


### 1.2 ಲೆಕ್ಕಗಳ ವಿನ್ಯಾಸ

1.2.1 ಸರ್ಕಾರದ ಲೆಕ್ಕಗಳನ್ನು ಮೂರು ಭಾಗಗಳಲ್ಲಿ ಇಡಲಾಗುತ್ತದೆ.

| | |
|---|---|
| **ಭಾಗ – 1 : ಸಂಚಿತ ನಿಧಿ** | ರಾಜಸ್ವ ಮತ್ತು ಬಂಡವಾಳ ಲೆಕ್ಕದ ಸ್ವೀಕೃತಿಗಳು ಮತ್ತು ವೆಚ್ಚ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳು, ಅಂತರರಾಜ್ಯ ಹೊಂದಾಣಿಕೆ ಮತ್ತು ಸಾದಿಲ್ವಾರು ನಿಧಿಗೆ ವಿನಿಯೋಗ ಲೆಕ್ಕಗಳನ್ನು ಒಳಗೊಂಡಿದೆ. |
| **ಭಾಗ – 2 : ಸಾದಿಲ್ವಾರು ನಿಧಿ** | ಆಯವ್ಯಯದಲ್ಲಿ ಸೇರಿಲ್ಲದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಸ್ಥಾಪಿಸಲಾಗಿದೆ. ಈ ನಿಧಿಯಿಂದ ಮಾಡಿದ ವೆಚ್ಚವನ್ನು ಅದೇ ಆರ್ಥಿಕ ವರ್ಷದಲ್ಲಿ ಋಣ ವರ್ಗಾವಣೆಯ ಮೂಲಕ ಅಥವಾ ಮುಂದಿನ ಆರ್ಥಿಕ ವರ್ಷದಲ್ಲಿ ಸಂಚಿತ ನಿಧಿಗೆ ಹೊಸ ಋಣದ ಮೂಲಕ ಪುನರ್ಭರ್ತಿ ಮಾಡಲಾಗುವುದು. |
| **ಭಾಗ – 3 : ಸಾರ್ವಜನಿಕ ಲೆಕ್ಕ** | ಇದು ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿಗಳು, ಮೀಸಲು ನಿಧಿಗಳು, ಠೇವಣಿಗಳು ಮತ್ತು ಮುಂಗಡಗಳು ಮತ್ತು ಇರಸಾಲು ವಹಿವಾಟುಗಳನ್ನು ಒಳಗೊಂಡಿದೆ. ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿ, ಮೀಸಲು ನಿಧಿ ಮತ್ತು ಠೇವಣಿಗಳು ಸರ್ಕಾರದ ಪುನರ್ಪಾವತಿಯ ಜವಾಬ್ದಾರಿಗಳಾದರೆ, ಮುಂಗಡಗಳು ಸರ್ಕಾರಕ್ಕೆ ಜಮೆಯಾಗಬೇಕಾದುದನ್ನು ಸೂಚಿಸುತ್ತವೆ. ಅಮಾನತ್ತು ಮತ್ತು ಇರಸಾಲು ವಹಿವಾಟುಗಳು ಹೊಂದಾಣಿಕೆಯ ನಮೂದುಗಳಾಗಿದ್ದು, ಅವುಗಳನ್ನು ಅಂತಿಮ ಲೆಕ್ಕ ಶೀರ್ಷಿಕೆಗೆ ಲೆಕ್ಕ ಮಾಡಿ ಚುಕ್ತಗೊಳಿಸಬೇಕಾಗುತ್ತದೆ. |

### 1.2.2 ಲೆಕ್ಕಗಳ ಸಂಕಲನ

ಲೆಕ್ಕಗಳ ಸಂಕಲನದ ಹರಿವಿನ ನಕ್ಷೆ :




## 1.3 ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು

### 1.3.1 ಹಣಕಾಸು ಲೆಕ್ಕಗಳು

ಹಣಕಾಸು ಲೆಕ್ಕಗಳು ಸರ್ಕಾರದ ಆಯಾ ವರ್ಷದ ಸ್ವೀಕೃತಿಗಳು ಮತ್ತು ವಿತರಣೆಗಳನ್ನಲ್ಲದೆ, ಲೆಕ್ಕಗಳಲ್ಲಿ ದಾಖಲಿಸಲಾದ ರಾಜಸ್ವ ಮತ್ತು ಬಂಡವಾಳ ಲೆಕ್ಕಗಳು, ಸಾರ್ವಜನಿಕ ಋಣ ಮತ್ತು ಸಾರ್ವಜನಿಕ ಲೆಕ್ಕಗಳ ಶಿಲ್ಕುಗಳು ತೋರಿಸುವ ಆರ್ಥಿಕ ಪರಿಣಾಮಗಳನ್ನು ಸಹ ಬಿಂಬಿಸುತ್ತವೆ.

ಹಣಕಾಸು ಲೆಕ್ಕಗಳು ಎರಡು ಸಂಪುಟಗಳನ್ನು ಹೊಂದಿದ್ದು, ಹೆಚ್ಚು ವ್ಯಾಪಕ ಮತ್ತು ಬೋಧಪ್ರದವಾಗಿದೆ. **ಸಂಪುಟ– I** ರಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಧೃಢೀಕರಣ ಪತ್ರ, ಹಣಕಾಸು ಲೆಕ್ಕಗಳ ಮಾರ್ಗದರ್ಶಿ, ಒಟ್ಟಾರೆ ಸ್ವೀಕೃತಿಗಳು ಮತ್ತು ವಿತರಣೆಗಳ ಸಂಕ್ಷಿಪ್ತ ವಿವರಣಾ ಪಟ್ಟಿಗಳು, ಸರ್ಕಾರದ ಆಸ್ತಿ ಮತ್ತು ಜವಾಬ್ದಾರಿಗಳು ಮತ್ತು 'ಲೆಕ್ಕಗಳ ಟಿಪ್ಪಣಿಗಳಲ್ಲಿ' ಒಳಗೊಂಡಿರುವ ಗಣನೀಯ ಲೆಕ್ಕಕಾರ್ಯ ನೀತಿಗಳು, ಲೆಕ್ಕಗಳ ಗುಣಮಟ್ಟವನ್ನು ನಿರ್ಧರಿಸುವ ನಿಧಿ, ಅಮಾನತ್ತು ಮತ್ತು ಇತರ ಪುಸ್ತಕ ಹೊಂದಾಣಿಕೆಗಳು ಮುಂತಾದ ಕೆಲವು ರೀತಿಯ ವಹಿವಾಟುಗಳು ಮತ್ತು ಇತರ ಬಾಬತ್ತುಗಳನ್ನು ಒಳಗೊಂಡಿದ್ದರೆ, **ಸಂಪುಟ– II** ರಲ್ಲಿ ಇತರ ಸಂಕ್ಷಿಪ್ತ ವಿವರಣಾ ಪಟ್ಟಿಗಳು **(ಭಾಗ–I)**, ಸವಿವರ ವಿವರಣಾ ಪಟ್ಟಿಗಳು **(ಭಾಗ–II)** ಮತ್ತು ಅನುಬಂಧಗಳನ್ನು **(ಭಾಗ–III )** ಒಳಗೊಂಡಿದೆ.

2013–14ರ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕರ್ನಾಟಕ ಸರ್ಕಾರದ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | | | |
|---|---|---|---|
| ಸ್ವೀಕೃತಿಗಳು (ಒಟ್ಟು :₹106,832) | ರಾಜಸ್ವ (ಒಟ್ಟು: ₹89,543) | ರಾಜ್ಯದ ಸ್ವಂತ ತೆರಿಗೆ ರಾಜಸ್ವ | 62,604 |
| | | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 13,808 |
| | | ತೆರಿಗೆಯೇತರ ರಾಜಸ್ವ | 4,032 |
| | | ಸಹಾಯಾನುದಾನ ಮತ್ತು ವಂತಿಗೆಗಳು($) | 9,099 |
| | ಬಂಡವಾಳ (ಒಟ್ಟು: ₹17,289) | ಸಾಲ ಮತ್ತು ಮುಂಗಡಗಳ ವಸೂಲಾತಿ | 109 |
| | | ಇತರೆ ಸ್ವೀಕೃತಿಗಳು (ಇತರೆ ಬಂಡವಾಳ ಸ್ವೀಕೃತಿಗಳು) | 88 |
| | | ಸಾಲಗಳು ಮತ್ತು ಇತರ ಜವಾಬ್ದಾರಿಗಳು(*) | 17,092 |
| ವಿತರಣೆಗಳು (ಒಟ್ಟು :₹106,832) | ರಾಜಸ್ವ (ಅ) | | 89,190 |
| | ಬಂಡವಾಳ | | 16,947 |
| | ಸಾಲಗಳು ಮತ್ತು ಮುಂಗಡಗಳು | | 695 |

($) ರಾಜ್ಯ ಆಯವ್ಯಯದ ಮೂಲಕ ದೊರೆಯುವ ಸಹಾಯಾನುದಾನಗಳು ಮತ್ತು ವಂತಿಗೆಗಳಲ್ಲದೆ ಕೇಂದ್ರ ಸರ್ಕಾರವು ವಿವಿಧ ಕೇಂದ್ರ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ರಾಜ್ಯ ಅನುಷ್ಠಾನಾಧಿಕಾರಿಗಳಿಗೆ / ಸರ್ಕಾರೇತರ ಸಂಘಗಳಿಗೆ ಸಾಕಷ್ಟು ಮೊತ್ತಗಳನ್ನು ನೇರವಾಗಿ ವರ್ಗಾಯಿಸುತ್ತದೆ. 2011–12ರಲ್ಲಿನ ₹ 5,469 ಕೋಟಿಗಳು, 2012–13 ರಲ್ಲಿ ₹ 6,649 ಕೋಟಿಗಳಿಗೆ ಪ್ರತಿಯಾಗಿ 2013–14ರಲ್ಲಿ ಕೇಂದ್ರ ಸರ್ಕಾರವು ₹ 7,811 ಕೋಟಿಗಳನ್ನು ನೇರವಾಗಿ ಬಿಡುಗಡೆಮಾಡಿದೆ. ಇದರಲ್ಲಿ ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತಗೊಂಡಿದ್ದರೂ ಕರ್ನಾಟಕ ಸರ್ಕಾರದ ಪರಿಧಿಗೆ ಒಳಪಡದ ಕೇಂದ್ರಿಯ ಸಂಸ್ಥೆಗಳು ಹಾಗೂ ವಿವಿಧ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿದ 2013–14ರ ₹ 865 ಕೋಟಿ, 2012–13ರ ₹ 2,096 ಕೋಟಿ ಹಾಗೂ 2011–12ರ ₹ 1,671 ಕೋಟಿಗಳನ್ನು ಹೊರತು ಪಡಿಸಿದೆ. ಯೋಜನಾವಾರು ವಿವರಗಳನ್ನು ಹಣಕಾಸು ಲೆಕ್ಕಗಳು – ಸಂಪುಟ IIರ (2013–14) ಅನುಬಂಧ VII ರಲ್ಲಿ ನೀಡಲಾಗಿದೆ.

(*) (ಅ) ಸಾರ್ವಜನಿಕ ಋಣ {₹ 13,470 ಕೋಟಿ}; (ಆ) ಸಾದಿಲ್ವಾರು ನಿಧಿ {ಇಲ್ಲ);

(ಇ) ಸಾರ್ವಜನಿಕ ಲೆಕ್ಕ {₹ 3,640 ಕೋಟಿ} ಮತ್ತು (ಈ) ನಗದು ಶಿಲ್ಕು {₹ 18 ಕೋಟಿ}ಗಳ ನಿವ್ವಳ ಕೊಡುಗೆಯನ್ನು ಒಳಗೊಂಡಿದೆ.

(ಚಿ) ಬಂಡವಾಳ ಆಸ್ತಿಗಳ ಸೃಜನೆಗೆ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿದ ₹ 3,105 ಕೋಟಿಗಳನ್ನು ಒಳಗೊಂಡಿದೆ. (ಹಣಕಾಸು ಲೆಕ್ಕಗಳ ಸಂಪುಟ II ರ ಸಂಕ್ಷಿಪ್ತ ವಿವರಣಾ ಪಟ್ಟಿ–8ನ್ನು ನೋಡಿ).

### 1.3.2. ಧನವಿನಿಯೋಗ ಲೆಕ್ಕಗಳು

ಧನವಿನಿಯೋಗ ಲೆಕ್ಕಗಳು ಹಣಕಾಸು ಲೆಕ್ಕಗಳಿಗೆ ಪೂರಕವಾಗಿದ್ದು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ಒಟ್ಟು ವೆಚ್ಚವನ್ನು ದಾಖಲಿಸಿ ಅವಕಾಶ ಒದಗಿಸಿದ್ದ ಮೊತ್ತಗಳಿಗೂ ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಕ್ಕೆ ವಿವರಣೆಗಳನ್ನು ನೀಡುತ್ತದೆ. ಒಟ್ಟು 28 ಪುರಸ್ಕೃತ ಅನುದಾನಗಳು ಮತ್ತು ಒಂದು ಪ್ರಭೃತ ವಿನಿಯೋಗವು ಇದೆ.

2013 ಮತ್ತು 2014ರ ಧನವಿನಿಯೋಗ ಅಧಿನಿಯಮವು ಪ್ರಸಕ್ತ ವರ್ಷದಲ್ಲಿ ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ₹12,198 ಕೋಟಿಗಳ ಪೂರಕ ಅನುದಾನವೂ ಸೇರಿದಂತೆ ₹ 137,314 ಕೋಟಿಗಳ ಒಟ್ಟು ವೆಚ್ಚವನ್ನು ಪ್ರಕ್ಷೇಪಿಸಿತ್ತು. ₹ 6,387ಕೋಟಿಗಳ ಮೊತ್ತವನ್ನು ವೆಚ್ಚದಲ್ಲಿ ಕಡಿಮೆಯೆಂದು ಪರಿಗಣಿಸಬೇಕಾದ ವಸೂಲಿಯ ಮೊತ್ತವಾಗಿ ಪ್ರಕ್ಷೇಪಿಸಲಾಗಿತ್ತು.

2013–14ರ ಧನವಿನಿಯೋಗ ಲೆಕ್ಕಗಳು ಒಟ್ಟಾರೆ ಆಯವ್ಯಯ ಅಂದಾಜು ₹137,314 ಕೋಟಿಗಳಿಗೆ ಪ್ರತಿಯಾಗಿ ₹113,717 ಕೋಟಿಗಳ ವೆಚ್ಚವನ್ನು ತೋರಿಸಿದ್ದು, ₹ 23,597 ಕೋಟಿಗಳ ನಿವ್ವಳ ಉಳಿತಾಯವಾಗಿದೆ. ವೆಚ್ಚದಲ್ಲಿ ಕಡಿತವೆಂದು ತೋರಿಸುವ ವಸೂಲಾತಿಯ ಮೊತ್ತವು ₹ 3,068 ಕೋಟಿಗಳಷ್ಟಿದ್ದು, ಆಯವ್ಯಯ ಅಂದಾಜಿನ ಮೊತ್ತಕ್ಕಿಂತಲೂ ₹ 3,319 ಕೋಟಿಗಳಷ್ಟು ಕಡಿಮೆಯಾಗಿದೆ. ಒಟ್ಟು ವೆಚ್ಚದ ಮೊತ್ತವು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದ ₹169 ಕೋಟಿಗಳನ್ನು ಒಳಗೊಂಡಿದ್ದು, ವರ್ಷದ ಕೊನೆಯಲ್ಲಿ ₹128 ಕೋಟಿಗಳಿಗೆ ಸವಿವರ ಬಿಲ್ಲುಗಳ ಸಲ್ಲಿಕೆಯು ಬಾಕಿ ಉಳಿದಿದೆ.

2013–14ರಲ್ಲಿ ₹ 695 ಕೋಟಿಗಳ ಮೊತ್ತವು ಸಾರ್ವಜನಿಕ ಲೆಕ್ಕದಡಿ ನಿರ್ದಿಷ್ಟ ಉದ್ದೇಶಗಳಿಗಾಗಿ ನಿಯುಕ್ತ ಆಡಳಿತಾಧಿಕಾರಿಗಳು ನಿರ್ವಹಿಸುವ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಚಿತ ನಿಧಿಯಿಂದ ವರ್ಗಾಯಿಸಲ್ಪಟ್ಟಿದೆ. ಸಾಧಾರಣವಾಗಿ, ಆಡಳಿತಾಧಿಕಾರಿಗಳು ಆರ್ಥಿಕ ವರ್ಷದ ಕೊನೆಯಲ್ಲಿ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತ ನಿಧಿಗೆ ವರ್ಗಾಯಿಸಬೇಕಾಗಿದೆ. ವರ್ಷದ ಕೊನೆಯಲ್ಲಿ ಒಟ್ಟಾರೆ ₹ 2,297 ಕೋಟಿಗಳ ಮೊತ್ತವು ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದಿತ್ತು.

## 1.4 ನಿಧಿಗಳ ಆಕರಗಳು ಮತ್ತು ಅನ್ವಯಗಳು

### 1.4.1 ಅರ್ಥೋಪಾಯ ಮುಂಗಡಗಳು

ಇವು ಕೇವಲ ತಾತ್ಕಾಲಿಕ ಸ್ವರೂಪದ ಮುಂಗಡಗಳು. ಭಾರತೀಯ ರಿಜರ್ವ್ ಬ್ಯಾಂಕಿನಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತ ಕಡಿಮೆಯಾದಾಗ ಆ ಕೊರತೆಯನ್ನು ತುಂಬಲು ಈ ಮುಂಗಡವನ್ನು ಪಡೆಯಲಾಗುತ್ತದೆ. ಗರಿಷ್ಠ ಅರ್ಥೋಪಾಯ ಮುಂಗಡವನ್ನು ಪಡೆದ ನಂತರವೂ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆಯಿದ್ದಲ್ಲಿ, ಆ ಕೊರತೆಯನ್ನು ಓವರ್ ಡ್ರಾಫ್ಟ್ ಸೌಲಭ್ಯದ ಮೂಲಕ ಭರಿಸಲಾಗುತ್ತದೆ. 2013–14ರಲ್ಲಿ ರಾಜ್ಯ ಸರ್ಕಾರವು ಭಾರತೀಯ ರಿಜರ್ವ್ ಬ್ಯಾಂಕಿನಿಂದ ಯಾವುದೇ ಅರ್ಥೋಪಾಯ ಮುಂಗಡ ಅಥವಾ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿರುವುದಿಲ್ಲ.

### 1.4.2 ನಿಧಿಗಳ ಹರಿವಿನ ವಿವರಣೆ

ರಾಜ್ಯ ಸರ್ಕಾರವು ₹ 353 ಕೋಟಿಗಳ ರಾಜಸ್ವ ಹೆಚ್ಚಳ ಮತ್ತು ₹ 17,092 ಕೋಟಿಗಳ ವಿತ್ತೀಯ ಕೊರತೆಯನ್ನು ಹೊಂದಿದ್ದು ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ರಾ. ಒ. ಆಂ.ಉ)[1] ಶೇಕಡ 0.06 ಮತ್ತು 2.84 ರಷ್ಟಿತ್ತು. ವಿತ್ತೀಯ ಕೊರತೆಯು ಒಟ್ಟು ವೆಚ್ಚದ ಶೇಕಡ 15.99 ರಷ್ಟಿತ್ತು. ಈ ಕೊರತೆಯನ್ನು ಸಾರ್ವಜನಿಕ ಋಣ (₹ 13,470 ಕೋಟಿ), ಸಾರ್ವಜನಿಕ ಲೆಕ್ಕದಡಿಯ ನಿವ್ವಳ ಹೆಚ್ಚಳ (₹ 3,640 ಕೋಟಿ), ಸಾಧಿಲ್ವಾರು ನಿಧಿಯ ಕೊಡುಗೆ (ಇಲ್ಲ) ಮತ್ತು ಆರಂಭಿಕ ಮತ್ತು ಅಂತಿಮ ಶಿಲ್ಕುಗಳ ನಿವ್ವಳ (₹ 18 ಕೋಟಿ) ಗಳಿಂದ ಭರಿಸಲಾಗಿತ್ತು. ಸುಮಾರು ಶೇಕಡ 79.28 ರಷ್ಟು ರಾಜಸ್ವ ಸ್ವೀಕೃತಿಗಳನ್ನು (₹ 89,543 ಕೋಟಿ) ಬದ್ಧ ವೆಚ್ಚಗಳಾದ ಸಂಬಳ[2] (₹ 8,065 ಕೋಟಿ), ಸಬ್ಸಿಡಿಗಳು[3] (₹ 13,323 ಕೋಟಿ), ಸಹಾಯಾನುದಾನ[2] (₹27,592 ಕೋಟಿ), ಬಡ್ಡಿಪಾವತಿ (₹ 7,837 ಕೋಟಿ), ನಿವೃತ್ತಿ ವೇತನ ಪಾವತಿ (₹ 9,152 ಕೋಟಿ), ಪರಿಹಾರ ಮತ್ತು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿಯೋಜನೆ (₹ 5,019 ಕೋಟಿ) ಇವುಗಳಿಗೆ ಖರ್ಚುಮಾಡಿದೆ.

**ನಿಧಿಗಳ ಆಕರಗಳು ಮತ್ತು ಅನ್ವಯಗಳು**

(₹ ಕೋಟಿಗಳಲ್ಲಿ)

| | ವಿವರಗಳು | ಮೊತ್ತ |
|---|---|---|
| ಆಕರಗಳು | 1.4.2013 ರಲ್ಲಿದ್ದಂತೆ ಆರಂಭಿಕ ಶಿಲ್ಕು | 68 |
| | ರಾಜಸ್ವ ಸ್ವೀಕೃತಿಗಳು | 89,543 |
| | ಇತರೆ ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ | 197 |
| | ಸಾರ್ವಜನಿಕ ಋಣ | 17,287 |
| | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಮತ್ತು ಇತರೆ | 4,508 |
| | ಮೀಸಲು ನಿಧಿಗಳು ಮತ್ತು ಋಣ ಪರಿಹಾರ ನಿಧಿಗಳು | 2,032 |
| | ಸ್ವೀಕೃತ ಠೇವಣಿಗಳು | 34,303 |
| | ಸಿವಿಲ್ ಮುಂಗಡಗಳ ಮರುಪಾವತಿ | … |
| | ಅಮಾನತ್ತು ಲೆಕ್ಕ | 217,195 |
| | ಇರಸಾಲುಗಳು | 27 |
| | ಸಾದಿಲ್ವಾರು ನಿಧಿ | … |
| | **ಒಟ್ಟು** | **365,160** |

## ನಿಧಿಗಳ ಆಕರಗಳು ಮತ್ತು ಅನ್ವಯಗಳು

(₹ ಕೋಟಿಗಳಲ್ಲಿ)

| | ವಿವರಗಳು | ಮೊತ್ತ |
|---|---|---|
| ಅನ್ವಯ | ರಾಜಸ್ವ ವೆಚ್ಚ | 89,190 |
| | ಬಂಡವಾಳ ವೆಚ್ಚ | 16,947 |
| | ಸಾಲ ನೀಡಿಕೆ | 695 |
| | ಸಾರ್ವಜನಿಕ ಋಣ ಮರುಪಾವತಿ | 3,817 |
| | ಸಣ್ಣ ಉಳಿತಾಯಗಳು, ಭವಿಷ್ಯನಿಧಿಗಳು ಮತ್ತು ಇತರೆ | 2,401 |
| | ಮೀಸಲು ಮತ್ತು ಋಣ ಪರಿಹಾರ ನಿಧಿಗಳು | 1,898 |
| | ಠೇವಣಿಗಳ ಮರುಪಾವತಿ | 31,463 |
| | ಸಾದಿಲ್ವಾರು ನಿಧಿ | … |
| | ಆಮಾನತ್ತು ಲೆಕ್ಕ | 218,624 |
| | ಇರಸಾಲುಗಳು | 39 |
| | ಅಂತಿಮ ಶಿಲ್ಕು 31.3.2014 ರಲ್ಲಿದ್ದಂತೆ | 86 |
| | **ಒಟ್ಟು** | **365,160** |


(1) 2013–14ನೇ ವರ್ಷದ ರಾ.ಒ.ಆಂ.ಉ. : ₹ 601,633 ಕೋಟಿ (ಆಕರ: ಮಧ್ಯಂತರ ವಿತ್ತೀಯ ಯೋಜನೆ 2014–18).

(2) ಸಂಬಳ, ಸಬ್ಸಿಡಿಗಳು ಮತ್ತು ಸಹಾಯಾನುದಾನಗಳು ಎಲ್ಲಾ ವಿಭಾಗಗಳಿಂದ ಸಂಕಲಿತವಾಗಿದೆ ಮತ್ತು ಸಂಬಳ ವೆಚ್ಚವು ಸ್ಥಳೀಯ ಸಂಸ್ಥೆಗಳಿಗೆ ಸಂಬಳಕ್ಕಾಗಿ ನೀಡಿದ ಅನುದಾನಗಳನ್ನು ಒಳಗೊಂಡಿರುವುದಿಲ್ಲ.

(3) ಸಬ್ಸಿಡಿ '106 ಸಬ್ಸಿಡಿಗಳು' ಅಡಿಯಲ್ಲಿ ಸಂಕಲಿಸಿದ ವೆಚ್ಚವನ್ನು ಒಳಗೊಂಡಿದೆ.


### 1.4.3 ರೂಪಾಯಿ ಎಲ್ಲಿಂದ ಬಂತು

ಸರ್ಕಾರವು ಮಾಡುವ ಸಾರ್ವಜನಿಕ ವೆಚ್ಚಗಳು ಮುಖ್ಯವಾಗಿ ಸಂಚಿತ ನಿಧಿಯಡಿಯ ಸರ್ಕಾರದ ಸ್ವೀಕೃತಿಗಳು, ಸಾರ್ವಜನಿಕ ಋಣ, ಸಾಲಗಳು ಮತ್ತು ಮುಂಗಡಗಳ ವಸೂಲಾತಿ ಮತ್ತು ಸಾರ್ವಜನಿಕ ಲೆಕ್ಕದಡಿಯ ನಿವ್ವಳ ಏರಿಕೆಗಳು ಎಂಬ ಮೂಲಗಳಿಂದ ಬಂದ ಜಮೆಗಳಿಂದ ಆಗುತ್ತದೆ. ಸಂಚಿತ ನಿಧಿಯಡಿ ಪ್ರತಿ ರೂಪಾಯಿಯ ವಿಭಾಗಾವಾರು ಸ್ವೀಕೃತಿಯನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.




### 1.4.4 ರೂಪಾಯಿ ಎಲ್ಲಿಗೆ ಹೋಯಿತು

ಸರ್ಕಾರವು ರಾಜ್ಯ ವಿಧಾನ ಮಂಡಲದ ಪೂರ್ವಾನುಮತಿಯೊಂದಿಗೆ ವಿವಿಧ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಮತ್ತು ವಸ್ತುನಿಷ್ಠ ವೆಚ್ಚಗಳಿಗೆ ಸಂಚಿತ ನಿಧಿಯಿಂದ ವೆಚ್ಚ ಮಾಡಲಾಗುತ್ತದೆ. ಪ್ರತಿ ರೂಪಾಯಿಯ ಮುಖ್ಯವಿಭಾಗಾವಾರು ವೆಚ್ಚವನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.




## 1.5 ಲೆಕ್ಕಗಳ ಮುಖ್ಯಾಂಶಗಳು

| ಕ್ರ. ಸಂ. | ವಿವರಗಳು | ಅಂದಾಜು 2013–14 | | ವಾಸ್ತವಿಕ | | ವಾಸ್ತವಿಕ ಹಾಗೂ ಅಂದಾಜುಗಳ ಶೇಕಡಾವಾರು | ವಾಸ್ತವಿಕ ಹಾಗೂ ರಾ.ಓ.ಆಂ.ಊ.ದ ಶೇಕಡಾವಾರು |
|---|---|---|---|---|---|---|---|
| | | (₹ ಕೋಟಿಗಳಲ್ಲಿ) | | | | | |
| 01. | ತೆರಿಗೆ ರಾಜಸ್ವ | 77,520 | (@) | 76,412 | (&) | 98.57 | 12.70 |
| 02. | ತೆರಿಗೆಯೇತರ ರಾಜಸ್ವ | 4,038 | | 4,032 | | 99.85 | 0.67 |
| 03. | ಸಹಾಯಾನುದಾನಗಳು ಮತ್ತು ವಂತಿಗೆಗಳು | 16,428 | | 9,099 | | 55.39 | 1.51 |
| **04.** | **ರಾಜಸ್ವ ಜಮೆಗಳು (1+2+3)** | **97,986** | | **89,543** | | **91.38** | **14.88** |
| 05. | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 135 | | 109 | | 80.74 | 0.02 |
| 06. | ಇತರೆ–ಜಮೆಗಳು ಇತರ ಬಂಡವಾಳ ಜಮೆಗಳು | 200 | | 88 | | 44.00 | 0.01 |
| 07. | ಋಣ ಮತ್ತು ಇತರೆ ಜವಾಬ್ದಾರಿಗಳು | 17,449 | (#) | 17,092 | ($) | 97.95 | 2.84 |
| **08.** | **ಬಂಡವಾಳ ಜಮೆಗಳು (5+6+7)** | **17,784** | | **17,289** | | **97.22** | **2.87** |
| **09.** | **ಒಟ್ಟಾರೆ ಜಮೆಗಳು (4+8)** | **115,770** | | **106,832** | | **92.28** | **17.76** |
| **10.** | **ಯೋಜನೇತರ ವೆಚ್ಚ (11+13)** | **64,924** | | **62,572** | | **96.38** | **10.40** |
| 11. | ರಾಜಸ್ವ ಲೆಕ್ಕ– ಯೋಜನೇತರ ವೆಚ್ಚ | 64,499 | | 62,220 | | 96.47 | 10.34 |
| 12. | 11ರಮೊತ್ತದಲ್ಲಿ ಬಡ್ಡಿ ಪಾವತಿ ಯೋಜನೇತರ ವೆಚ್ಚ | 8,500 | | 7,837 | (^) | 92.20 | 1.30 |
| 13. | ಬಂಡವಾಳ ಲೆಕ್ಕ–ಯೋಜನೇತರ ವೆಚ್ಚ | 425 | | 352 | | 82.82 | 0.06 |
| **14.** | **ಯೋಜನಾ ವೆಚ್ಚ (15+16)** | **50,846** | | **44,260** | | **87.05** | **7.36** |
| 15. | ರಾಜಸ್ವ ಲೆಕ್ಕ– ಯೋಜನಾ ವೆಚ್ಚ | 32,891 | | 26,970 | | 82.00 | 4.48 |
| 16. | ಬಂಡವಾಳ ವೆಚ್ಚ–ಯೋಜನಾ ವೆಚ್ಚ | 17,955 | | 17,290 | | 96.30 | 2.87 |
| **17.** | **ಒಟ್ಟಾರೆ ವೆಚ್ಚ {(10+14) = (18+19)}** | **115,770** | | **106,832** | | **92.28** | **17.76** |
| 18. | ರಾಜಸ್ವ ವೆಚ್ಚ (11+15) | 97,390 | | 89,190 | | 91.58 | 14.82 |
| 19. | ಬಂಡವಾಳ ವೆಚ್ಚ (13+16) | 18,380 | (a) | 17,642 | (b) | 95.98 | 2.93 |
| **20.** | **ರಾಜಸ್ವ ಹೆಚ್ಚಳ (4-18)** | **596** | | **353** | | **59.23** | **0.06** |
| **21.** | **ವಿತ್ತೀಯ ಕೊರತೆ {(17) - (4+5+6) = 7}** | **17,449** | | **17,092** | | **97.95** | **2.84** |

(*) 2013–14ನೇ ವರ್ಷದ ರಾ.ಒ.ಆಂ.ಉ : ₹601,633 ಕೋಟಿ (ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18).
@ ₹ 15,056 ಕೋಟಿ ರಾಜ್ಯ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ.
(&) ₹ 13,808 ಕೋಟಿ ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ.
(#) (i) ಸಾರ್ವಜನಿಕ ಋಣ (16,556 ಕೋಟಿ) (ii) ಸಾರ್ವಜನಿಕ ಲೆಕ್ಕ (973 ಕೋಟಿ) ಮತ್ತು (iii) ನಗದು ಶಿಲ್ಕು {80ಕೋಟಿ} ಇವುಗಳ ನಿವ್ವಳವಾಗಿರುತ್ತದೆ.
($) (i) ಸಾರ್ವಜನಿಕ ಋಣ ( ₹ 13,470ಕೋಟಿ) (ii) ಸಾದಿಲ್ವಾರು ನಿಧಿ (ಇಲ್ಲ) ಮತ್ತು (iii) ಸಾರ್ವಜನಿಕ ಲೆಕ್ಕ ( ₹ 3,640ಕೋಟಿ) ಮತ್ತು ( iv) ನಿವ್ವಳ ನಗದು ಶಿಲ್ಕು (₹ 18 ಕೋಟಿ) ಇವುಗಳನ್ನು ಒಳಗೊಂಡಿರುತ್ತದೆ.
(a) ಬಂಡವಾಳ ವೆಚ್ಚ (₹ 17,627ಕೋಟಿ), ಸಾಲಗಳು ಮತ್ತು ಮುಂಗಡಗಳು (₹ 753 ಕೋಟಿ) ಇವುಗಳ ಅಂದಾಜನ್ನು ಒಳಗೊಂಡಿರುತ್ತದೆ.
(b) ಬಂಡವಾಳ ವೆಚ್ಚ (₹16,947 ಕೋಟಿ) ಮತ್ತು ಸಾಲಗಳು ಮತ್ತು ಮುಂಗಡಗಳು (₹695 ಕೋಟಿ) ಇವುಗಳನ್ನು ಒಳಗೊಂಡಿರುತ್ತದೆ.
(^) ಆಯವ್ಯಯದಿಂದ ಹೊರತುಪಡಿಸಿದ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು ಹೊರತುಪಡಿಸಿದೆ.

## 1.6 ಕೊರತೆ ಮತ್ತು ಹೆಚ್ಚಳಗಳು ಏನನ್ನು ಸೂಚಿಸುತ್ತದೆ ?

| | |
|---|---|
| **ಕೊರತೆ** | ಆದಾಯ ಮತ್ತು ವೆಚ್ಚಗಳ ನಡುವಿನ ಅಂತರಕ್ಕೆ ಸಂಬಂಧಿಸಿದೆ. ಕೊರತೆಯ ವಿಧ ಕೊರತೆಯನ್ನು ಹೇಗೆ ನಿಭಾಯಿಸಲಾಗಿದೆ ಮತ್ತು ನಿಧಿಗಳ ಬಳಕೆಯು ಹಣಕಾಸು ನಿರ್ವಹಣಯಲ್ಲಿನ ವಿವೇಚನಯ ಸೂಚಕಗಳಾಗಿವೆ. |
| **ರಾಜಸ್ವ ಕೊರತೆ / ಹೆಚ್ಚಳ** | ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಸೂಚಿಸುತ್ತದೆ. ಅಸ್ತಿತ್ವದಲ್ಲಿರುವ ಸರ್ಕಾರದ ಸಂಸ್ಥೆಗಳ ನಿರ್ವಹಣೆಗೆ ರಾಜಸ್ವ ವೆಚ್ಚದ ಅಗತ್ಯವಿದ್ದು, ವಾಸ್ತವದಲ್ಲಿ ಇದನ್ನು ರಾಜಸ್ವ ಸ್ವೀಕೃತಿಗಳಲ್ಲಿಯೇ ಪೂರ್ಣವಾಗಿ ಭರಿಸಬೇಕು. |
| **ವಿತ್ತೀಯ ಕೊರತೆ / ಹೆಚ್ಚಳ** | ಒಟ್ಟು ಸ್ವೀಕೃತಿಗಳು ಸಾಲಗಳ (ಸ್ವೀಕೃತಿಗಳು/ ಮರುಪಾವತಿಗಳನ್ನು ಹೊರತುಪಡಿಸಿ) ಮತ್ತು ಒಟ್ಟು ವೆಚ್ಚಗಳ ನಡುವಿನ ಅಂತರವನ್ನು ಸೂಚಿಸುತ್ತದೆ. ಹಾಗಾಗಿ ಈ ಅಂತರವು ಸಾಲಗಳ ಮೂಲಕ ಭರಿಸಲ್ಪಟ್ಟ ವೆಚ್ಚದ ಪ್ರಮಾಣವನ್ನು ಸೂಚಿಸುತ್ತದೆ. ವಾಸ್ತವವಾಗಿ ಸಾಲಗಳ ಮೂಲಕ ಪಡೆದ ಮೊತ್ತವನ್ನು ಬಂಡವಾಳ ಯೋಜನೆಗಳಲ್ಲಿ ಹೂಡಬೇಕಾಗಿರುತ್ತದೆ. |

ಕೊರತೆ ಸೂಚಕಗಳು, ಆದಾಯದ ವೃದ್ಧಿ ಮತ್ತು ವೆಚ್ಚ ನಿರ್ವಹಣೆಗಳು ಸರ್ಕಾರದ ವಿತ್ತ ನಿರ್ವಹಣೆಯ ಮಾಪನಕ್ಕೆ ಪ್ರಮುಖ ಮಾನದಂಡಗಳಾಗಿವೆ. XIನೇ ಹಣಕಾಸು ಆಯೋಗದ ಶಿಫಾರಸ್ಸಿಗೆ ಅನುಗುಣವಾಗಿ, **ವಿತ್ತೀಯ ಜವಾಬ್ದಾರಿ ಅಧಿನಿಯಮ** 2002ನ್ನು ಜಾರಿಗೆ ತಂದ ಮೊದಲ ರಾಜ್ಯವಾಗಿ ಕರ್ನಾಟಕ ಸರ್ಕಾರವು 1ನೇ ಏಪ್ರಿಲ್ 2002 ರಿಂದ ನಾಲ್ಕು ಆರ್ಥಿಕ ವರ್ಷಗಳೊಳಗೆ ರಾಜಸ್ವ ಕೊರತೆಯನ್ನು ತೊಡೆದು ಹಾಕುವ ಬದ್ಧತೆಯನ್ನು ಸೂಚಿಸಿತ್ತು. ರಾಜ್ಯ ಸರ್ಕಾರವು ರಾಜಸ್ವ ಹೆಚ್ಚಳವನ್ನು 2004–05ರಲ್ಲಿಯೇ ಸಾಧಿಸುವಲ್ಲಿ ಹಾಗೂ ವಿತ್ತ ಜವಾಬ್ದಾರಿ ಕಾಯಿದೆಯಂತೆ ವಿತ್ತೀಯ ಕೊರತೆ ರಾ.ಒ.ಆಂ.ಉ.ದ ಅನುಪಾತವನ್ನು ಶೇಕಡ 3ಕ್ಕಿಂತ ಕಡಿಮೆ ಇರಿಸುವುದರಲ್ಲಿ ಯಶಸ್ವಿಯಾಗಿದೆ. ವಿತ್ತೀಯ ಜವಾಬ್ದಾರಿ ಅಧಿನಿಯಮ 2002ರ ತಿದ್ದುಪಡಿ ಮೂಲಕ ವಿತ್ತೀಯ ಕೊರತೆಯ ಮಿತಿಯನ್ನು 2009–10 ಮತ್ತು 2010–11 ರ ಸಾಲಿಗೆ ಶೇಕಡ 4 ಮತ್ತು ಶೇಕಡ 3.44 ಕ್ಕೆ ಪರಿಷ್ಕರಿಸಲಾಯಿತು. XIIIನೇ ವಿತ್ತ ಆಯೋಗದ ಶಿಫಾರಸ್ಸು ಮತ್ತು ವಿತ್ತೀಯ ಜವಾಬ್ದಾರಿ ಅಧಿನಿಯಮದ ತಿದ್ದುಪಡಿ (ಮೇ 2011) ರ ಅನ್ವಯ ರಾಜ್ಯ ಸರ್ಕಾರವು : (1) ಬಾಕಿ ಇರುವ ಸಾಲ ಮೊತ್ತವು 2014–15ರ ಅಂತ್ಯಕ್ಕೆ ಅಂದಾಜಿಸಿದ ರಾ.ಒ.ಆಂ.ಉ.ದ ಶೇಕಡ 25.20 ರಷ್ಟಿರಬೇಕು ಮತ್ತು ಬಾಕಿ ಸಾಲವು 31.3.2014ರ ಅಂತ್ಯಕ್ಕೆ ಶೇಕಡ 25.40 ರಷ್ಟಿರಬೇಕು. (2) 2013–14ರಲ್ಲಿ ವಿತ್ತೀಯ ಕೊರತೆಯು ಅಂದಾಜಿಸಿದ ರಾಜ್ಯದ ಒಟ್ಟು ಅಂತರಿಕ ಉತ್ಪನ್ನದ ಶೇಕಡ 3.00 ಹೆಚ್ಚಾಗಬಾರದೆಂಬ ವಿತ್ತೀಯ ಗುರಿಗಳನ್ನು ಇಟ್ಟುಕೊಂಡಿತ್ತು. 2011–12, 2012–13 ಹಾಗೂ 2013–14ರಲ್ಲಿ ವಿತ್ತೀಯ ಕೊರತೆಯ ಗುರಿ ಮತ್ತು ವಾಸ್ತವಿಕ ಕೊರತೆಯು ಕ್ರಮವಾಗಿ ಶೇಕಡ 3.00/2.87, 3.00/2.78 ಮತ್ತು 3.00/2.84 ರಷ್ಟಿತ್ತು. 2013–14 ಸಾಲಿನ ಅಂತ್ಯಕ್ಕೆ ಬಾಕಿ ಇದ್ದ ಸಾಲ ಅಂದಾಜಿಸಿದ ರಾ.ಒ.ಆಂ.ಉ.ದ ಶೇಕದ 22.49ರಷ್ಟು ಮತ್ತು ವಿತ್ತೀಯ ಕೊರತೆಯು ಶೇಕಡ 2.84 ರಷ್ಟಿದ್ದು, ಹಿಂದಿನ ವರ್ಷಕ್ಕಿಂತ ಸ್ವಲ್ಪ (ಶೇಕಡ 0.06 ರಷ್ಟು) ಹೆಚ್ಚಾಗಿತ್ತು.

### 1.6.1 ರಾಜಸ್ವ ಹೆಚ್ಚಳದ ಪ್ರವೃತ್ತಿ


ರಾಜಸ್ವ ಹೆಚ್ಚಳವು ಸರ್ಕಾರದ ರಾಜಸ್ವ ವೆಚ್ಚಕ್ಕಿಂತ ಹೆಚ್ಚಿನ ರಾಜಸ್ವ ಸ್ವೀಕೃತಿಗಳ ನಿವ್ವಳ ಅಧಿಕ್ಯವನ್ನು ಸೂಚಿಸುತ್ತದೆ. ಹಿಂದಿನ ಐದು ವರ್ಷಗಳಿಗೆ ರಾಜಸ್ವ ಹೆಚ್ಚಳವು ರಾ.ಒ.ಆಂ.ಉ. ದ ಶತಾಂಶವಾಗಿ ಈ ಕೆಳಗಿನ ಕೋಷ್ಟಕದಲ್ಲಿ ಹಾಗೂ ನಕ್ಷೆಯಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ರಾಜಸ್ವ ಹೆಚ್ಚಳ | 1,619 (#) | 4,172 | 4,521 | 1,883 | 353 |
| ರಾ. ಒ. ಆಂ ಉ.* | 335,747 | 380,871 | 434,270 | 522,650 | 601,633 |
| ರಾ.ಆಂಉ.ದ ಶತಾಂಶವಾಗಿ ರಾ.ಹೆಚ್ಚಳ | 0.48 | 1.09 | 1.04 | 0.36 | 0.06 |

* ರಾ.ಒ.ಆಂ.ಉ.2013–14 ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18.

(#) 2009–10 ರಲ್ಲಿ ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡಿದ ಅನುದಾನವನ್ನು (₹ 10 ಕೋಟಿ) ಸಮಾನಾಂಶ ಹೂಡಿಕೆಯಾಗಿ ಪ್ರೊಫಾರ್ಮ ತಿದ್ದುಪಡಿ ಮೂಲಕ ಪರಿವರ್ತಿಸಿದ್ದರಿಂದ ಸಂಚಿತ ಬಂಡವಾಳ ವೆಚ್ಚದಲ್ಲಿ ಹೆಚ್ಚಳವಾಗಿದೆ ಹಾಗೂ ಸಂಚಿತ ರಾಜಸ್ವ ಹೆಚ್ಚಳ ಕಡಿಮೆಯಾಗಿದೆ.





1.6.2 ವಿತ್ತೀಯ ಕೊರತೆಯ ಪ್ರವೃತ್ತಿ

ವಿತ್ತೀಯ ಕೊರತೆಯನ್ನು ಒಟ್ಟು ವೆಚ್ಚ (ರಾಜಸ್ವ + ಬಂಡವಾಳ + ನಿವ್ವಳ ಸಾಲ ಮತ್ತು ಮುಂಗಡಗಳು)ದಲ್ಲಿ ರಾಜಸ್ವ ಸ್ವೀಕೃತಿಗಳು ಮತ್ತು ಇತರೆ ಬಂಡವಾಳ ಸ್ವೀಕೃತಿಗಳನ್ನು ಕಳೆದು ಲೆಕ್ಕ ಮಾಡಲಾಗುತ್ತದೆ.

(₹ ಕೋಟಿಗಳಲ್ಲಿ)

| | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ರಾಜಸ್ವ ಹೆಚ್ಚಳ | 10,875 | 10,688 | 12,470 | 14,507 | 17,092 |
| ರಾ. ಒ. ಆಂ ಉ.* | 335,747 | 380,871 | 434,270 | 522,650 | 601,633 |
| ರಾ.ಆಂಉ.ದ ಶತಾಂಶವಾಗಿ ರಾ.ಹೆಚ್ಚಳ | 3.24 | 2.81 | 2.87 | 2.78 | 2.84 |

* ರಾ.ಒ.ಆಂ.ಉ.2013–14 ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18.



### 1.6.3 ಸರ್ಕಾರದ ಲೆಕ್ಕಪತ್ರಗಳು

ಆಯಾ ವರ್ಷದ ಒಟ್ಟು ವೆಚ್ಚಕ್ಕೂ (ರಾಜಸ್ವ ಮತ್ತು ಬಂಡವಾಳ ವೆಚ್ಚಗಳೆರಡೂ ಸೇರಿ) ವರ್ಷದ ಒಟ್ಟು ಆದಾಯಕ್ಕೂ (ರಾಜಸ್ವ ಮತ್ತು ಋಣ ಹೊರತು ಪಡಿಸಿದ ಬಂಡವಾಳ ಆದಾಯಗಳು) ಇರುವ ಹೆಚ್ಚಳ / ಕೊರತೆಯ ವ್ಯತ್ಯಾಸವನ್ನು 'ಸರ್ಕಾರದ ಲೆಕ್ಕ' ಎಂದು ಕರೆಯಲಾಗುವ ಪ್ರತ್ಯೇಕ ಖಾತೆಗೆ ವರ್ಗಾಯಿಸಲಾಗುವುದು. ಜೊತೆಗೆ, ಹಿಂದಿನ ವರ್ಷದ ಲೆಕ್ಕಗಳ ಹೊಂದಾಣಿಕೆ ಮತ್ತು ಇತರೆ ಸರ್ಕಾರಿ ಲೆಕ್ಕಗಳ ನಿವ್ವಳ ಪರಿಣಾಮದ ಅಂಶಗಳನ್ನು ಈ ಖಾತೆಗೆ ವರ್ಗಾಯಿಸಲಾಗುವುದು.

ಹೀಗೆ 'ಸರ್ಕಾರದ ಲೆಕ್ಕ'ದಲ್ಲಿ ವರ್ಷಾನುವರ್ಷ ಸರ್ಕಾರದ ವ್ಯವಹಾರಗಳಿಂದುಂಟಾದ ಆರ್ಥಿಕ ಹೆಚ್ಚಳ / ಕೊರತೆಗಳ ಸಂಚಿತ ಪರಿಣಾಮವು ಲಭ್ಯವಾಗುತ್ತದೆ.ಹಿಂದಿನ ಐದು ವರ್ಷಗಳ "ಸರ್ಕಾರ ಲೆಕ್ಕ"ಗಳ ವಿವರಗಳು ಈ ಕೆಳಗಿನಂತಿವೆ:

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ಶೀರ್ಷಿಕೆ | | | ಬಂಡವಾಳ ಶೀರ್ಷಿಕೆ | | | ಇತರೆ ಶೀರ್ಷಿಕೆ (#) ಹೆಚ್ಚಳ(+) ಕೊರತೆ(–) | ಸದರಿ ಸಾಲಿನ ಕೊರತೆ(–) | ಸಂಚಿತ ಹೆಚ್ಚಳ(+) ಕೊರತೆ(–) |
|---|---|---|---|---|---|---|---|---|---|
| | ಜಮೆ | ಬಟವಾಡೆ | ಹೆಚ್ಚಳ(+) ಕೊರತೆ(–) | ಜಮೆ | ಬಟವಾಡೆ | ಹೆಚ್ಚಳ(+) ಕೊರತೆ(–) | | | |
| 2009-10 | 49,156 | 47,537[a] | (+) 1,619[b] | 70 | 12,137 | (-) 12,067 | (+) 64 | (-) 10,384 | (-) 70,810 |
| 2010-11 | 58,206 | 54,034 | (+) 4,172 | 72 | 13,355 | (-) 13,283 | (+) 55 | (-) 9,056 | (-) 79,866[a] |
| 2011-12 | 69,806 | 65,115 | (+) 4,521[c] | 89 | 15,506 | (-) 15,417 | (+) 55 | (-)10,841 | (-) 90,707[b] |
| 2012-13 | 78,176 | 76,293 | (+) 1,883 | 33 | 15,479 | (-) 15,446 | … | (-)13,563 | (-)104,270 |
| 2013-14 | 89,543 | 89,190 | (+) 353 | 88 | 16,947 | (-) 16,859 | … | (-) 16,506 | (-) 120,776 |

(#) ಇತರೆ ಸರ್ಕಾರದ ಲೆಕ್ಕ.

(a) 2009–10 ರಲ್ಲಿ ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡಿದ ಅನುದಾನ ಸಮಾನಾಂಶ ಹೂಡಿಕೆಯಾಗಿ ಸಂಚಿತ ಬಂಡವಾಳ ವೆಚ್ಚದಲ್ಲಿ ಹೆಚ್ಚಳವಾದ ಪ್ರೊಫಾರ್ಮಾ ತಿದ್ದುಪಡಿ ಮೂಲಕ ಪರಿವರ್ತಿಸಿದ (₹ 10.00 ಕೋಟಿ) ಒಳಗೊಂಡಿದೆ ಹಾಗೂ 2010–11 ರ ಸಂಚಿತ ರಾಜಸ್ವ ಹೆಚ್ಚಳವು ಕಡಿಮೆಯಾಗಿದೆ.

(b) 2008–09 ರಲ್ಲಿ ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡಿದ ಅನುದಾನ ಸಮಾನಾಂಶ ಹೂಡಿಕೆಯಾಗಿ ಸಂಚಿತ ಬಂಡವಾಳ ವೆಚ್ಚದಲ್ಲಿ ಹೆಚ್ಚಳವಾದ ಪ್ರೊಫಾರ್ಮಾ ತಿದ್ದುಪಡಿ ಮೂಲಕ ಪರಿವರ್ತಿಸಿದ (₹ 4.00 ಕೋಟಿ) 2011–12 ರ ಸಂಚಿತ ರಾಜಸ್ವ ಹೆಚ್ಚಳವು ಕಡಿಮೆಯಾಗಿದೆ.

(c) 2011–12 ರಲ್ಲಿ ಕೇಂದ್ರ ಸರ್ಕಾರವು XIII ನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ಕೇಂದ್ರ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಸಾಲದ ಮನ್ನಾ ಮಾಡಿದ ಬಾಬ್ತು (₹ 170.00 ಕೋಟಿ) ಹೊರತುಪಡಿಸಿದೆ.

### 1.6.4 ಸಾಲದ ಮೊತ್ತದಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ

ಸಾಲವಾಗಿ ಪಡೆದ ಮೊತ್ತವನ್ನು ಪೂರ್ಣವಾಗಿ ಬಂಡವಾಳ ಆಸ್ತಿ ನಿರ್ಮಾಣಕ್ಕೆ ಬಳಸಿ ರಾಜಸ್ವ ಸ್ವೀಕೃತಿಗಳನ್ನು ಬಡ್ಡಿಪಾವತಿಗೆ ಉಪಯೋಗಿಸುವುದು ಸೂಕ್ತ, ಆದರೆ, ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನ ಸಾಲದ ಮೊತ್ತವನ್ನು ಸಂಪೂರ್ಣವಾಗಿ (₹ 17,287 ಕೋಟಿ) ಬಂಡವಾಳ ವೆಚ್ಚಕ್ಕೆ ಸಾಲ ಮತ್ತು ಮುಂಗಡಗಳ ವಿತರಣೆಯಲ್ಲಿ ಸೇರಿದಂತೆ (₹17,642 ಕೋಟಿ) ಖರ್ಚು ಮಾಡಲಾಗಿದೆ.

# ಅಧ್ಯಾಯ – 2

## ಸ್ವೀಕೃತಿಗಳು


### 2.1 ಪೀಠಿಕೆ

ಸರ್ಕಾರದ ಸ್ವೀಕೃತಿಗಳನ್ನು ರಾಜಸ್ವ ಸ್ವೀಕೃತಿಗಳು ಮತ್ತು ಬಂಡವಾಳ ಸ್ವೀಕೃತಿಗಳು ಎಂದು ವರ್ಗೀಕರಿಸಲಾಗಿದೆ. 2013–14ನೇ ಸಾಲಿನ ಒಟ್ಟು ಸ್ವೀಕೃತಿಗಳು ₹ 89,543 ಕೋಟಿಗಳಷ್ಟಿದ್ದು, ಇದು ತೆರಿಗೆ ರಾಜಸ್ವ (₹ 76,412 ಕೋಟಿ, ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳು ₹ 13,808 ಕೋಟಿ ಒಳಗೊಂಡು), ತೆರಿಗೆಯೇತರ ರಾಜಸ್ವ (₹ 4,032 ಕೋಟಿ), ಕೇಂದ್ರ ಸರ್ಕಾರದ ಸಹಾಯಾನುದಾನ ಮತ್ತು ವಂತಿಗೆಗಳು (₹ 9,099 ಕೋಟಿ) ಮತ್ತು ಬಂಡವಾಳ ಸ್ವೀಕೃತಿಗಳು (₹ 17,289 ಕೋಟಿ), ಸಾಲ ಮತ್ತು ಮುಂಗಡಗಳ ವಸೂಲಾತಿ (₹ 109 ಕೋಟಿ) ಒಳಗೊಂಡಂತೆ, ಇತರೆ ಬಂಡವಾಳ ಸ್ವೀಕೃತಿಗಳು (₹ 88 ಕೋಟಿ) ಹಾಗೂ 'ಸಾಲಗಳು ಮತ್ತು ಇತರೆ ಜವಾಬ್ದಾರಿಗಳು' (₹ 17,092 ಕೋಟಿ) ಒಳಗೊಂಡ (1) ಈ – "ಸಾರ್ವಜನಿಕ ಋಣ" (₹ 13,470 ಕೋಟಿ) (2) "ಸಾದಿಲ್ವಾರು ನಿಧಿ" (ಇಲ್ಲ), (3) "ಸಾರ್ವಜನಿಕ ಲೆಕ್ಕ" (₹3,640 ಕೋಟಿ) ಮತ್ತು "ನಗದು ಶಿಲ್ಕು" (₹18 ಕೋಟಿ) ವಹಿವಾಟಿನ ನಿವ್ವಳ ಕೊಡುಗೆ ಸೇರಿವೆ.

### 2.2 ರಾಜಸ್ವ ಸ್ವೀಕೃತಿಗಳು

ರಾಜ್ಯ ಸರ್ಕಾರದ ರಾಜಸ್ವ ಸ್ವೀಕೃತಿಗಳು ರಾಜ್ಯದ ಸ್ವಂತ ತೆರಿಗೆ ಮತ್ತು ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲನ್ನೊಳಗೊಂಡಂತೆ 'ತೆರಿಗೆ ರಾಜಸ್ವ', 'ತೆರಿಗೆಯೇತರ ರಾಜಸ್ವ' ಮತ್ತು 'ಕೇಂದ್ರ ಸರ್ಕಾರದ ಸಹಾಯಾನುದಾನಗಳು ಮತ್ತು ವಂತಿಗೆಗಳು' ಎಂಬ ಮೂರು ಮುಖ್ಯ ಮೂಲಗಳಿಂದ ಒಳಗೊಂಡಿದೆ.

| | |
|---|---|
| **ತೆರಿಗೆ ರಾಜಸ್ವ** | ಇದು ರಾಜ್ಯ ಸರ್ಕಾರವು ಸಂಗ್ರಹಿಸಿ ಉಳಿಸಿಕೊಂಡ ತೆರಿಗೆಗಳು ಮತ್ತು ಸುಂಕಗಳು ಮತ್ತು ಸಂವಿಧಾನದ ಅನುಚ್ಛೇದ 280(3)ರ ಅನ್ವಯ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲನ್ನು ಒಳಗೊಂಡಿದೆ. |
| **ತೆರಿಗೆಯೇತರ ರಾಜಸ್ವ** | ಇದರಲ್ಲಿ ಬಡ್ಡಿ ಸ್ವೀಕೃತಿ ಲಾಭಾಂಶಗಳು ಮತ್ತು ಲಾಭಗಳು ಮತ್ತು ಇತರ ಇಲಾಖಾ ಸ್ವೀಕೃತಿಗಳು ಸೇರಿವೆ. |
| **ಸಹಾಯಾನುದಾನಗಳು ಮತ್ತು ವಂತಿಗೆಗಳು** | ಇದು ರಾಜ್ಯ ಸರ್ಕಾರಕ್ಕೆ ಕೇಂದ್ರ ನೀಡಿದ ಸಹಾಯವಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರದ ಮೂಲಕ ವಿದೇಶ ಸರ್ಕಾರಗಳಿಂದ ಪಡೆದ ಬಾಹ್ಯ ಅನುದಾನ ಸಹಾಯ ಮತ್ತು ಸಹಾಯ ಸಾಮಗ್ರಿಗಳು ಮತ್ತು ಸಾಧನಗಳು ಸೇರಿವೆ. |



2.2.1 ರಾಜಸ್ವ ಸ್ವೀಕೃತಿಗಳ ಭಾಗಗಳು

ಒಟ್ಟು ರಾಜಸ್ವ ಸ್ವೀಕೃತಿಗಳಿಗೆ 'ತೆರಿಗೆ ರಾಜಸ್ವ' ಮತ್ತು 'ತೆರಿಗೆಯೇತರ ರಾಜಸ್ವ' ಗಳ ಶತಾಂಶವನ್ನು ಈ ಕೆಳಗೆ ನೀಡಲಾಗಿದೆ.

| ಭಾಗಗಳು | ವಾಸ್ತವಿಕ (₹ ಕೋಟಿಗಳಲ್ಲಿ) | ಒಟ್ಟು ರಾಜಸ್ವ ಜಮೆಗೆ ಶೇಕಡಾವಾರು |
|---|---|---|
| **ಅ. ತೆರಿಗೆ ರಾಜಸ್ವ*** | **76,412** | **85** |
| ವರಮಾನ ಮತ್ತು ವೆಚ್ಚದ ಮೇಲಣ ತೆರಿಗೆಗಳು | 8,516 | 10 |
| ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಣ ತೆರಿಗೆಗಳು | 6,401 | 07 |
| ಸರಕು ಮತ್ತು ಸೇವೆಗಳ ಮೇಲಣ ತೆರಿಗೆ | 61,495 | 68 |
| **ಬ. ತೆರಿಗೆಯೇತರ ರಾಜಸ್ವ** | **4,032** | **5** |
| ಬಡ್ಡಿ ಜಮೆಗಳು, ಲಾಭ ಮತ್ತು ಲಾಭಾಂಶಗಳು | 749 | 1 |
| ಸಾಮಾನ್ಯ ಸೇವೆಗಳು | 612 | 1 |
| ಸಾಮಾಜಿಕ ಸೇವೆಗಳು | 491 | 1 |
| ಆರ್ಥಿಕ ಸೇವೆಗಳು | 2,180 | 2 |
| **ಕ. ಸಹಾಯಾನುದಾನಗಳು ಮತ್ತು ವಂತಿಗೆಗಳು** | **9,099** | **10** |
| **ಒಟ್ಟು ರಾಜಸ್ವ ಜಮೆಗಳು** | **89,543** | **100** |

* ಕೇಂದ್ರ ಸರ್ಕಾರದಿಂದ ಹಂಚಲಾದ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ₹ 13,808 ಕೋಟಿಗಳನ್ನು ಒಳಗೊಂಡಿದೆ. (ರಾಜಸ್ವ ಜಮೆಯ ಶೇ. 15.42).

ಒಟ್ಟು ತೆರಿಗೆ ಆದಾಯ ₹ 76,412 ಕೋಟಿ ಮತ್ತು ತೆರಿಗೆಯೇತರ ಆದಾಯ ₹ 4,032 ಕೋಟಿ ಕ್ರಮವಾಗಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ* ಶೇಕಡ 12.70 ಮತ್ತು ಶೇಕಡ 0.67 ರಷ್ಟಿವೆ.

2.2.2 ಆದಾಯದ ಪ್ರಮುಖ ಮೂಲಗಳು :.

'ರಾಜಸ್ವ ತೆರಿಗೆ'ಗೆ ಪ್ರಮುಖ ಮೂಲಗಳ ರಾ.ಓ.ಆಂ.ಊ.ದ ಶೇಕಡಾವಾರನ್ನು ಈ ಕೆಳಗೆ ನೀಡಲಾಗಿದೆ.

| ಲೆಕ್ಕ ಶೀರ್ಷಿಕೆ | (₹ಕೋಟಿಗಳಲ್ಲಿ) | ರಾ.ಓ.ಆಂ.ಊ.ದ ಶೇಕಡಾವಾರು |
|---|---|---|
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಣ ತೆರಿಗೆಗಳು | 33,719 | 5.60 |
| ರಾಜ್ಯ ಅಬಕಾರಿ | 12,828 | 2.13 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 6,189 | 1.03 |
| ನಿಗಮ ತೆರಿಗೆ | 4,644 | 0.77 |
| ವಾಹನ ಮೇಲಣ ತೆರಿಗೆಗಳು | 3,912 | 0.65 |
| ನಿಗಮ ತೆರಿಗೆ ಹೊರತಾಗಿ ವರಮಾನದ ಮೇಲಿನ ತೆರಿಗೆಗಳು | 3,058 | 0.51 |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 2,626 | 0.44 |
| ಸೀಮಾ ಸುಂಕ | 2,253 | 0.37 |
| ಕೇಂದ್ರ ಅಬಕಾರಿ ಸುಂಕ | 1,591 | 0.26 |
| ಸೇವಾ ತೆರಿಗೆ | 2,250 | 0.37 |
| ಸರಕು ಮತ್ತು ಸೇವೆಗಳ ಮೇಲಣ ಇತರ ತೆರಿಗೆ ಮತ್ತು ಶುಲ್ಕ | 1,420 | 0.24 |

* 2013–14 ನೇ ವರ್ಷದ ರಾ.ಓ.ಆಂ.ಉ :₹601,633 ಕೋಟಿ (ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18)

ಪ್ರಸಕ್ತ ಸಾಲಿನಲ್ಲಿ ನಿವ್ವಳ ತೆರಿಗೆ ಸ್ವೀಕೃತಿಗಳು ಆಯವ್ಯಯ ಅಂದಾಜುಗಳಿಗಿಂತಲೂ ₹1,108ಕೋಟಿಗಳಷ್ಟು ಕಡಿಮೆಯಾಗಿದೆ. ವ್ಯತ್ಯಾಸವಿರುವ ಪ್ರಮುಖ ಬಾಬುಗಳು ಈ ಕೆಳಕಂಡಂತೆ ಇವೆ.

(₹ ಕೋಟಿಗಳಲ್ಲಿ)

| ಆಯವ್ಯಯ ಅಂದಾಜುಗಳಿಗಿಂತ ಕಡಿಮೆ ಇರುವ ವಾಸ್ತವಗಳು | | ಆಯವ್ಯಯ ಅಂದಾಜುಗಳಿಗಿಂತ ಹೆಚ್ಚಳವಿರುವ ವಾಸ್ತವಗಳು | |
|---|---|---|---|
| ನಿಗಮ ತೆರಿಗೆ | 1,282 | ಸೇವಾ ತೆರಿಗೆ | 453 |
| ಸೀಮಾ ಸುಂಕ | 358 | ರಾಜ್ಯ ಅಬಕಾರಿ | 228 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 311 | ಸರಕು ಮತ್ತು ಸೇವೆಗಳ ಮೇಲಣ ಇತರ ತೆರಿಗೆ ಮತ್ತು ಶುಲ್ಕ | 211 |
| ವಾಹನ ಮೇಲಣ ತೆರಿಗೆಗಳು | 209 | ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಣ ತೆರಿಗೆಗಳು | 129 |
| ಕೇಂದ್ರ ಅಬಕಾರಿ ಸುಂಕ | 98 | ವಿದ್ಯುಚ್ಛಕ್ತಿಯ ಮೇಲಣ ತೆರಿಗೆ ಮತ್ತು ಶುಲ್ಕ | 72 |
| | | ನಿಗಮ ತೆರಿಗೆ ಹೊರತಾಗಿ ವರಮಾನದ ಮೇಲಿನ ತೆರಿಗೆಗಳು | 48 |
| | | ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 101 |


## 2.3 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ


ಕಳೆದ ಐದು ವರ್ಷಗಳ ರಾಜಸ್ವ ಸ್ವೀಕೃತಿಗಳ ವಿಭಾಗಗಳ ಪ್ರವೃತ್ತಿ ಮತ್ತು ರಾ.ಒ.ಆಂ.ಉದ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶವನ್ನು ನಕ್ಷೆಯ ಸಹಿತ ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷ | ತೆರಿಗೆ ರಾಜಸ್ವ | ತೆರಿಗೆಯೇತರ ರಾಜಸ್ವ | ಸಹಾಯಾನುದಾನಗಳು ಮತ್ತು ವಂತಿಗೆಗಳು | ಒಟ್ಟು ರಾಜಸ್ವ ಸ್ವೀಕೃತಿ | ರಾ.ಒ.ಆಂ.ಉ* | ರಾ.ಒ.ಆಂ.ಉ ದ ಮೇಲೆ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶ |
|---|---|---|---|---|---|---|
| 2009-10 | 37,939 | 3,334 | 7,883 | 49,156 | 335,747 | 14.64 |
| 2010-11 | 47,979 | 3,358 | 6,869 | 58,206 | 380,871 | 15.28 |
| 2011-12 | 57,551 | 4,087 | 8,168 | 69,806 | 434,270 | 16.07 |
| 2012-13 | 66,401 | 3,966 | 7,809 | 78,176 | 522,650 | 14.96 |
| 2013-14 | 76,412 | 4,032 | 9,099 | 89,543 | 601,633 | 14.88 |

*(ರಾ.ಒ.ಆಂ.ಉ.ದ 2013–14 ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18).







2.3.1 ತೆರಿಗೆ ರಾಜಸ್ವದ ಭಾಗಗಳು

ಕಳೆದ ಐದು ವರ್ಷಗಳ ತೆರಿಗೆ ರಾಜಸ್ವದ (ಉಪ–ವಿಭಾಗವಾರು) ಪ್ರವೃತ್ತಿಯನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ತೆರಿಗೆ ರಾಜಸ್ವ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 5,252 | 6,238 | 7,189 | 7,978 | 8,516 |
| ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳು | 2,763 | 3,716 | 4,855 | 5,438 | 6,401 |
| ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆಗಳು | 29,924 | 38,025 | 45,507 | 52,985 | 61,495 |
| **ಒಟ್ಟು ರಾಜಸ್ವ ತೆರಿಗೆ** | **37,939** | **47,979** | **57,551** | **66,401** | **76,412** |



## 2.4 ರಾಜ್ಯದ ಸ್ವಂತ ತೆರಿಗೆಯ ಸಂಗ್ರಹದ ನಿರ್ವಹಣೆ

| ವರ್ಷ | ತೆರಿಗೆ ರಾಜಸ್ವ | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು | ರಾಜ್ಯದ ಸ್ವಂತ ತೆರಿಗೆ ರಾಜಸ್ವ | ರಾ.ಒ.ಆಂ.ಉ* | ರಾಜ್ಯದ ಸ್ವಂತ ತೆರಿಗೆ ರಾಜಸ್ವದ್ವ ರಾ.ಒ.ಆಂ.ಉ. ಶತಾಂಶ |
|---|---|---|---|---|---|
| | (₹ ಕೋಟಿಗಳಲ್ಲಿ) | | | | |
| 2009-10 | 37,939 | 7,360 | 30,579 | 335,747 | 9.11 |
| 2010-11 | 47,979 | 9,506 | 38,473 | 380,871 | 10.10 |
| 2011-12 | 57,551 | 11,075 | 46,476 | 434,270 | 10.70 |
| 2012-13 | 66,401 | 12,647 | 53,754 | 522,650 | 10.28 |
| 2013-14 | 76,412 | 13,808 | 62,604 | 601,633 | 10.41 |

* ರಾ.ಒ.ಆಂ.ಉ. ದ 2013–14 ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18.

## 2.5 ತೆರಿಗೆ ಸಂಗ್ರಹದ ದಕ್ಷತೆ

### ಎ. ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳು*

(₹ ಕೋಟಿಗಳಲ್ಲಿ)

| ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ರಾಜಸ್ವ ಸಂಗ್ರಹ | 2,755 | 3,709 | 4,838 | 5,430 | 6,388 |
| ಸಂಗ್ರಹದ ಮೇಲಿನ ವೆಚ್ಚ (ಎ) | 200 | 218 | 254 | 312 | 362 |
| ತೆರಿಗೆ ಸಂಗ್ರಹದ ಶೇಕಡಾವಾರು ಶುಲ್ಕ | 7.26 | 5.88 | 5.25 | 5.75 | 5.67 |

(*) 'ಸೀಮಾ ಶುಲ್ಕ, ಕೇಂದ್ರ ಅಬಕಾರಿ ಶುಲ್ಕ, ಸೇವಾ ತೆರಿಗೆ – ಇವುಗಳನ್ನು ಹೊರತುಪಡಿಸಿದೆ'.

(ಎ) ಒಳಶೀರ್ಷಿಕೆ '001- ನಿರ್ದೇಶನ ಮತ್ತು ಆಡಳಿತ' ಹಾಗೂ '101-ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ.

### ಬಿ. ವಸ್ತು ಮತ್ತು ಸೇವಾ ತೆರಿಗೆ

(₹ ಕೋಟಿಗಳಲ್ಲಿ)

| ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ರಾಜಸ್ವ ಸಂಗ್ರಹ | 27,287 | 34,205 | 41,023 | 47,608 | 55,401 |
| ಸಂಗ್ರಹದ ಮೇಲಿನ ವೆಚ್ಚ (A) | 258 | 291 | 344 | 454 | 1,457 |
| ತೆರಿಗೆ ಸಂಗ್ರಹದ ಶೇಕಡಾವಾರು ಶುಲ್ಕ | 0.95 | 0.85 | 0.84 | 0.95 | 2.63 |

* ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಯಲ್ಲಿ, ರಾಜ್ಯದ ತೆರಿಗೆಯ ಭಾಗವಲ್ಲದ 'ಆಸ್ತಿಯ ಮೇಲಿನ ತೆರಿಗೆ'ಯನ್ನು ಹೊರತುಪಡಿಸಿದೆ.

(A) '001 ನಿರ್ದೇಶನ ಮತ್ತು ಆಡಳಿತ' ಹಾಗೂ '101 ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ.

## 2.6 ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯ ಪಾಲಿನ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಪ್ರಧಾನ ಶೀರ್ಷಿಕೆ ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ನಿಗಮ ತೆರಿಗೆ | 3,029 | 3,716 | 4,359 | 4,543 | 4,644 |
| ನಿಗಮ ತೆರಿಗೆ ಹೊರತಾದ ವರಮಾನದ ಮೇಲಿನ ತೆರಿಗೆ | 1,687 | 1,963 | 2,214 | 2,720 | 3,058 |
| ಐಶ್ವರ್ಯ ತೆರಿಗೆ | 7 | 8 | 17 | 8 | 13 |
| ಸೀಮಾ ಸುಂಕ | 1,030 | 1,662 | 1,920 | 2,102 | 2,253 |
| ಕೇಂದ್ರ ಅಬಕಾರಿ ಸುಂಕ | 830 | 1,209 | 1,243 | 1,428 | 1,591 |
| ಸೇವಾ ತೆರಿಗೆ | 777 | 948 | 1,322 | 1,847 | 2,250 |
| ಸರಕುಗಳ ಮತ್ತು ಸೇವೆಗಳ ಮೇಲಿನ ಸುಂಕ ಮತ್ತು ಇತರ ತೆರಿಗೆಗಳು | * | * | * | * | * |
| **ರಾಜ್ಯ ಪಾಲಿನ ಕೇಂದ್ರ ತೆರಿಗೆ ಮತ್ತು ಸುಂಕಗಳು** | **7,360** | **9,506** | **11,075** | **12,647** | **13,808** |
| **ಒಟ್ಟು ತೆರಿಗೆ ರಾಜಸ್ವ** | **37,939** | **47,979** | **57,551** | **66,401** | **76,412** |
| **ಒಟ್ಟು ತೆರಿಗೆ ರಾಜಸ್ವಕ್ಕೆ ಕೇಂದ್ರ ತೆರಿಗೆ ಮತ್ತು ಸುಂಕಗಳ ಶತಾಂಶ** | **19.40** | **19.81** | **19.24** | **19.05** | **18.07** |


* ₹ಒಂದು ಕೋಟಿಗಿಂತಲೂ ಕಡಿಮೆ ಮೊತ್ತಗಳನ್ನು ಮತ್ತು ಶೀರ್ಷಿಕೆಯಡಿ ಸ್ವೀಕೃತಿಯಾದ ಮೊತ್ತಕ್ಕಿಂತ ಸಂಗ್ರಹದ ವೆಚ್ಚ ಅಧಿಕವಾಗಿರುವುದರಿಂದ ಋಣಾತ್ಮಕ ಅಂಕಿಯಾಗಿ ಸೂಚಿತವಾಗಿರುವ ಮೊತ್ತಗಳನ್ನು (ಭಾರತ ಸರ್ಕಾರದ ವಿತ್ತ ಸಚಿವಾಲಯದ ಮಂಜೂರಾತಿ ಆದೇಶದಲ್ಲಿ ಸೂಚಿಸಿರುವಂತೆ) ತೋರಿಸುತ್ತದೆ.

## 2.7 ಸಹಾಯಾನುದಾನ ಮತ್ತು ವಂತಿಗೆಗಳು

ಸಹಾಯಾನುದಾನ ಮತ್ತು ವಂತಿಗೆಗಳು ಕೇಂದ್ರ ಸರ್ಕಾರದಿಂದ ಬಂದ ಸಹಾಯವನ್ನು ಸೂಚಿಸುತ್ತದೆ ಮತ್ತು ಇದು ಯೋಜನಾ ಆಯೋಗ ಅನುಮೋದಿಸಿದ ರಾಜ್ಯ ಯೋಜನಾ ಕಾರ್ಯಕ್ರಮಗಳು, ಕೇಂದ್ರ ಯೋಜನೆಗಳು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಮತ್ತು ಹಣಕಾಸು ಆಯೋಗ ಶಿಫಾರಸ್ಸು ಮಾಡಿದ ರಾಜ್ಯ ಯೋಜನೇತರ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಕಳೆದ ಐದು ವರ್ಷಗಳಲ್ಲಿ ಸಹಾಯಾನುದಾನ ಮತ್ತು ವಂತಿಗೆಯಡಿಯಲ್ಲಿನ ಒಟ್ಟು ಸ್ವೀಕೃತಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಸಹಾಯಾನುದಾನ ಮತ್ತು ವಂತಿಗೆಗಳ ಭಾಗಗಳು | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಯೋಜನೇತರ ಅನುದಾನಗಳು | 3,429 | 2,257 | 2,129 | 2,455 | 3,140 |
| ರಾಜ್ಯ ಯೋಜನೆಗಳಿಗೆ ಅನುದಾನ | 2,973 | 2,839 | 3,626 | 2,909 | 3,341 |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 61 | 145 | 76 | 124 | 192 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 1,420 | 1,628 | 2,337 | 2,321 | 2,426 |
| **ಒಟ್ಟು** | **7,883** | **6,869** | **8,168** | **7,809** | **9,099** |



ಒಟ್ಟು ಸಹಾಯಾನುದಾನ ಮತ್ತು ವಂತಿಗೆಗಳಲ್ಲಿ ಯೋಜನೇತರ ಅನುದಾನದ ಪಾಲು 2012–13 ರಲ್ಲಿದ್ದ ಶೇಕಡ 31 ರಿಂದ 2013–14ರಲ್ಲಿ ಶೇಕಡ 35ಕ್ಕೆ ಹೆಚ್ಚಿದ್ದರೆ, ರಾಜ್ಯ ಯೋಜನಾ ಕಾರ್ಯಕ್ರಮಗಳ ಅನುದಾನದ ಪಾಲು 2012–13ರಲ್ಲಿದ್ದ ಶೇಕಡ 37, 2013–14ರಲ್ಲಿಯೂ ಅಷ್ಟಕ್ಕೇ ಉಳಿದಿದೆ. ಯೋಜನಾ ಕಾರ್ಯಕ್ರಮಗಳಿಗೆ ಕೇಂದ್ರದ ಪಾಲು ಆಯವ್ಯಯದ ಅಂದಾಜಿನ ₹10,133 ಕೋಟಿಗಳಿಗೆ ಪ್ರತಿಯಾಗಿ, ವಾಸ್ತವವಾಗಿ ₹2,618 ಕೋಟಿಗಳ ಅನುದಾನವನ್ನು ಪಡೆಯಲಾಗಿದೆ (ಆಯವ್ಯಯ ಅಂದಾಜಿನ ಶೇಕಡ 26).

## 2.8 ಸಾರ್ವಜನಿಕ ಋಣ

ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ಋಣದಡಿ ಸ್ವೀಕೃತಿಗಳ ಪ್ರವೃತ್ತಿಯನ್ನು ಕೆಳಗೆ ಸೂಚಿಸಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ರಾಜ್ಯದ ಆಂತರಿಕ ಋಣ | 7,310 | 5,210 | 8,091 | 12,116 | 16,132 |
| ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳು | 681 | 1,504 | 1,267 | 1,349 | 1,155 |
| **ಒಟ್ಟು ಸಾರ್ವಜನಿಕ ಋಣ** | **7,991** | **6,714** | **9,358** | **13,465** | **17,287** |

ಪ್ರಸಕ್ತ 2013–14 ಸಾಲಿನಲ್ಲಿ ಸರ್ಕಾರವು ₹14,997 ಕೋಟಿಗಳಷ್ಟು ಮಾರುಕಟ್ಟೆ ಸಾಲಗಳನ್ನು ಪಡೆದಿದೆ. ಇದರಲ್ಲಿ 2023ರಲ್ಲಿ ವಿಮೋಚನೆಗೊಳ್ಳುವ ಆರು ಸಾಲಗಳ ಮೊತ್ತ ₹9,802 ಕೋಟಿ ಮತ್ತು 2024ರಲ್ಲಿ ವಿಮೋಚನೆಗೊಳ್ಳುವ ಮೂರು ಸಾಲಗಳ ಮೊತ್ತ ₹5,195 ಕೋಟಿಗಳನ್ನು ಒಳಗೊಂಡಿದೆ.

2013–14ರಲ್ಲಿ ರಾಜ್ಯ ಸರ್ಕಾರದ ₹16,132 ಕೋಟಿಯ ಆಂತರಿಕ ಋಣ ಮತ್ತು ಈ ಅವಧಿಯಲ್ಲಿ ಪಡೆದ ₹1,155 ಕೋಟಿಗಳ ಕೇಂದ್ರ ಸಾಲದ ಭಾಗಕ್ಕೆ ಪ್ರತಿಯಾಗಿ, ಬಂಡವಾಳ ವೆಚ್ಚವು ₹ 17,642 ಕೋಟಿಯಷ್ಟಿತ್ತು. (ಇದರಲ್ಲಿ ₹3,817 ಕೋಟಿ ಮೊತ್ತದ ಸಾರ್ವಜನಿಕ ಋಣದ ಮರುಪಾವತಿಯನ್ನು ಹೊರತುಪಡಿಸಿದೆ).

# ಅಧ್ಯಾಯ III

## ವೆಚ್ಚಗಳು

### 3.1 ಪೀಠಿಕೆ

ವೆಚ್ಚಗಳನ್ನು ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚ ಎಂದು ವರ್ಗೀಕರಿಸಲಾಗಿದೆ. ರಾಜಸ್ವ ವೆಚ್ಚವನ್ನು ರಾಜ್ಯ ಸರ್ಕಾರದ ಇಲಾಖೆಗಳ ದಿನನಿತ್ಯದ ಖರ್ಚಿನ ನಿರ್ವಹಣೆಗೆ ಬಳಸಲಾಗುತ್ತದೆ. ಬಂಡವಾಳ ವೆಚ್ಚವನ್ನು ಶಾಶ್ವತ ಆಸ್ತಿ ನಿರ್ಮಾಣ ಅಥವಾ ಅಂತಹ ಆಸ್ತಿಗಳ ಬಳಕೆಯನ್ನು ಹೆಚ್ಚಿಸಲು ಅಥವಾ ಶಾಶ್ವತ ಜವಾಬ್ದಾರಿಗಳನ್ನು ಕಡಿಮೆಯಾಗಿಸಲು ಬಳಸಲಾಗುತ್ತದೆ. ವೆಚ್ಚವನ್ನು ಯೋಜನೆ ಮತ್ತು ಯೋಜನೇತರ ಎಂದೂ ವರ್ಗೀಕರಿಸಲಾಗಿದೆ.

| | |
|---|---|
| **ಸಾಮಾನ್ಯ ಸೇವೆಗಳು** | ನ್ಯಾಯಾಂಗ, ಪೊಲೀಸ್, ಬಂದೀಖಾನೆ, ಲೋಕೋಪಯೋಗಿ, ನಿವೃತ್ತಿ ವೇತನ ಮುಂತಾದವುಗಳು ಸೇರಿವೆ. |
| **ಸಾಮಾಜಿಕ ಸೇವೆಗಳು** | ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು, ಪ.ಜಾ/ಪ.ವರ್ಗಗಳ ಕಲ್ಯಾಣ ಮುಂತಾದವುಗಳನ್ನು ಒಳಗೊಂಡಿದೆ. |
| **ಆರ್ಥಿಕ ಸೇವೆಗಳು** | ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ ಕೈಗಾರಿಕೆಗಳು, ಸಾರಿಗೆ ಮುಂತಾದವುಗಳನ್ನು ಒಳಗೊಂಡಿದೆ. |

### 3.2 ರಾಜಸ್ವ ವೆಚ್ಚ

2013–14ನೇ ಸಾಲಿನ ₹ 89,190 ಕೋಟಿಗಳ ರಾಜಸ್ವ ವೆಚ್ಚವು ಆಯವ್ಯಯ ಅಂದಾಜಿಗಿಂತಲೂ (₹ 97,391 ಕೋಟಿ) ₹ 8,201 ಕೋಟಿಗಳಷ್ಟು ಕಡಿಮೆಯಾಗಿದೆ. ಆಯವ್ಯಯ ಅಂದಾಜಿಗಿಂತಲೂ ಕಡಿಮೆ ವೆಚ್ಚದಿಂದಾಗಿ ಯೋಜನಾ ವೆಚ್ಚದಲ್ಲಿ ₹ 5,015 ಕೋಟಿಗಳು ಮತ್ತು ಯೋಜನೇತರ ವೆಚ್ಚದಲ್ಲಿ ₹ 3,186 ಕೋಟಿಗಳಷ್ಟು ಇಳಿಕೆಯು ಉಂಟಾಗಿದೆ. ಕಳೆದ ಐದು ವರ್ಷಗಳಲ್ಲಿ ಆಯವ್ಯಯ ಅಂದಾಜಿಗೆ ಪ್ರತಿಯಾಗಿ ರಾಜಸ್ವ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಆಯವ್ಯಯ ಅಂದಾಜುಗಳು | 47,238 | 53,138 | 65,034 | 80,530 | 97,391 |
| ವಾಸ್ತವ ವೆಚ್ಚ | 47,537(&) | 54,034 | 65,115 | 76,293 | 89,190 |
| ಅಂತರ | (-) 299 | (-) 896 | (-) 81 | 4,237 | 8,201 |
| ಆಯವ್ಯಯಕ್ಕೆ ಅಂತರ ಶೇಕಡಾವಾರು | (-) 1 | (-) 2 | (-) 1 | 5 | 8 |

(&) 2009–10 ರಲ್ಲಿ ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡಿದ ಅನುದಾನ ಸಮಾನಾಂಶ ಹೂಡಿಕೆಯಾಗಿ ಸಂಚಿತ ಬಂಡವಾಳ ವೆಚ್ಚದಲ್ಲಿ ಹೆಚ್ಚಳವಾದ ಪ್ರೊಫಾರ್ಮಾ ತಿದ್ದುಪಡಿ ಮೂಲಕ ಪರಿವರ್ತಿಸಿದ (₹ 10.00 ಕೋಟಿ) ಒಳಗೊಂಡಿದೆ.

#### 3.2.1 ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ

(₹ ಕೋಟಿಗಳಲ್ಲಿ)

| ಭಾಗಗಳು | ಮೊತ್ತ | ಶೇಕಡಾವಾರು |
|---|---|---|
| **A. ಸಾಮಾನ್ಯ ಸೇವೆಗಳು** (*) | **24,954** | **28.00** |
| a. ರಾಜ್ಯದ ಅಂಗಗಳು | 1,010 | 1.00 |
| b. ವಿತ್ತೀಯ ಸೇವೆಗಳು | 1,860 | 2.00 |
| (i) ವರಮಾನ ಮತ್ತು ಖರ್ಚುಗಳ ಮೇಲಿನ ತೆರಿಗೆಗಳ ಸಂಗ್ರಹ | 5 | |
| (ii) ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆ ಸಂಗ್ರಹ | 376 | … |
| (iii) ಸರಕುಗಳ ಮತ್ತು ಸೇವೆಗಳ ಮೇಲಿನ ತೆರಿಗೆ ಸಂಗ್ರಹ | 1,470 | 1.65 |
| (iv) ಇತರ ವಿತ್ತೀಯ ಸೇವೆಗಳು | 8 | … |
| c. ಬಡ್ಡಿ ಪಾವತಿ ಮತ್ತು ಋಣ ಸೇವೆ (&) | 7,837 | 8.79 |
| d. ಆಡಳಿತ ಸೇವೆಗಳು | 5,030 | 5.64 |
| e. ನಿವೃತ್ತಿ ವೇತನ ಮತ್ತು ಇತರ ಸಾಮಾನ್ಯ ಸೇವೆಗಳು | 9,217 | 10.33 |
| **B. ಸಾಮಾಜಿಕ ಸೇವೆಗಳು** | **32,622** | **36.56** |
| **C. ಆರ್ಥಿಕ ಸೇವೆಗಳು** | **26,593** | **29.81** |
| **D. ಸಹಾಯಾನುದಾನ ಮತ್ತು ವಂತಿಗೆಗಳು** | **5,021** | **5.63** |
| **ಒಟ್ಟು ವೆಚ್ಚ (ರಾಜಸ್ವ ಲೆಕ್ಕ)** | **89,190** | **100.00** |

(*) ರಾಜಸ್ವ ವೆಚ್ಚದ ಉಪವಿಭಾಗಗಳ ಶತಾಂಶವು ಒಟ್ಟು ರಾಜಸ್ವ ವೆಚ್ಚಕ್ಕೆ ಸಂಬಂಧಿಸಿದೆ.

(&) ಆಯವ್ಯಯದಿಂದ ಹೊರತುಪಡಿಸಿದ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು ಹೊರತುಪಡಿಸಿದೆ.


## 3.2.2 ರಾಜಸ್ವ ವೆಚ್ಚದ ಪ್ರವೃತ್ತಿ

(₹ ಕೋಟಿಗಳಲ್ಲಿ)

| ವರ್ಷ | ಸಾಮಾನ್ಯ ಸೇವೆಗಳು | ಸಾಮಾಜಿಕ ಸೇವೆಗಳು | ಆರ್ಥಿಕ ಸೇವೆಗಳು | ಸಹಾಯಾನು–ದಾನದ ಮತ್ತು ವಂತಿಗೆಗಳು | ಒಟ್ಟು ರಾಜಸ್ವ ವೆಚ್ಚಗಳು | ರಾ.ಒ.ಆಂ. ಉ. | ರಾ.ಒ.ಆಂ.ಉ. ಕ್ಕೆ ಒಟ್ಟು ರಾಜಸ್ವ ವೆಚ್ಚದ ಶತಾಂಶ |
|---|---|---|---|---|---|---|---|
| 2009-10 | 12,762 | 19,119 | 13,182[a] | 2,474 | 47,537[a] | 335,747 | 14.16 |
| 2010-11 | 14,055 | 22,108 | 14,892 | 2,979 | 54,034 | 380,871 | 14.19 |
| 2011-12 | 16,445 | 25,172 | 19,154 | 4,344 | 65,115 | 434,270 | 14.99 |
| 2012-13 | 20,181 | 30,420 | 21,674 | 4,018 | 76,293 | 522,650 | 14.60 |
| 2013-14 | 24,954 | 32,622 | 26,593 | 5,021 | 89,190 | 601,633 | 14.82 |

*ರಾ.ಒ.ಆಂ.ಉ.ದ 2013–14 ಆಕರ : ಮಧ್ಯಂತರ ವಿತ್ತೀಯ ಯೋಜನೆ 2014-18.

(a) 2009–10 ರಲ್ಲಿ ಹಾಲು ಒಕ್ಕೂಟಗಳಿಗೆ ಬಿಡುಗಡೆ ಮಾಡಿದ ಅನುದಾನ ಸಮಾನಾಂಶ ಹೂಡಿಕೆಯಾಗಿ ಸಂಚಿತ ಬಂಡವಾಳ ವೆಚ್ಚದಲ್ಲಿ ಹೆಚ್ಚಳವಾದ ಪ್ರೊಫಾರ್ಮಾ ತಿದ್ದುಪಡಿ ಮೂಲಕ ಪರಿವರ್ತಿಸಿದ (₹ 10.00 ಕೋಟಿ) ಒಳಗೊಂಡಿದೆ.




*ಸಾಮಾನ್ಯ ಸೇವೆಗಳಲ್ಲಿ ಪ್ರಧಾನ ಶೀರ್ಷಿಕೆ 2049– ಬಡ್ಡಿ ಪಾವತಿಗಳನ್ನು ಒಳಗೊಂಡಿದೆ.

## *3.2.3* ವೆಚ್ಚದ ಪ್ರಮುಖ ವಿಭಾಗಗಳು

ಕಳೆದ ಐದು ವರ್ಷಗಳಲ್ಲಿ ಪ್ರಮುಖ ಉಪವಿಭಾಗಗಳ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ

(₹ ಕೋಟಿಗಳಲ್ಲಿ)

| ವೆಚ್ಚದ ವಿಭಾಗಗಳು | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಬಡ್ಡಿ ಪಾವತಿ ಮತ್ತು ಋಣ ಸೇವೆಗಳು | 5,213 | 5,641 | 6,062[@] | 6,833[@] | 7,837[@] |
| ನಿವೃತ್ತಿ ವೇತನ ಮತ್ತು ಇತರ ಸಾಮಾನ್ಯ ಸೇವೆಗಳು | 3,435 | 4,095 | 5,468 | 7,292 | 9,217 |
| ಆಡಳಿತ ಸೇವೆಗಳು | 3,079 | 3,186 | 3,622 | 4,456 | 5,030 |
| ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ | 8,576 | 10,790 | 12,240 | 14,624 | 16,166 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 1,927 | 2,360 | 2,958 | 3,568 | 4,093 |
| ನೀರು ಸರಬರಾಜು, ನೈರ್ಮಲ್ಯ, ವಸತಿ ಮತ್ತು ನಗರಾಭಿವೃದ್ಧಿ | 1,558 | 2,002 | 1,873 | 2,360 | 2,670 |
| ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ, ಇತರ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ | 1,703 | 2,504 | 2,940 | 3,581 | 3,720 |


(₹ ಕೋಟಿಗಳಲ್ಲಿ)


| ವೆಚ್ಚದ ವಿಭಾಗಗಳು | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಸಾಮಾಜಿಕ ಕಲ್ಯಾಣ ಮತ್ತು ಪೌಷ್ಟಿಕತೆ | 4,908 | 3,866 | 4,559 | 5,542 | 5,388 |
| ಕೃಷಿ ಮತ್ತು ಸಂಬಂಧಿಸಿದ ಚಟುವಟಿಕೆಗಳು | 4,258 | 4,777 | 5,501 | 7,417 | 12,590 |
| ಗ್ರಾಮೀಣ ಅಭಿವೃದ್ಧಿ | 1,233 | 1,371 | 1,949 | 2,378 | 2,283 |
| ಇಂಧನ | 2,353 | 4,460 | 5,326 | 7,070 | 5,996 |
| ಸಾರಿಗೆ | 1,108 | 1,365 | 1,695 | 2,024 | 2,560 |
| ಸಾಮಾನ್ಯ ಆರ್ಥಿಕ ಸೇವೆಗಳು | 2,946 | 1,672 | 3,150 | 1,151 | 1,337 |

@ಆಯವ್ಯಯದಿಂದ ಹೊರತುಪಡಿಸಿದ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು ಮತ್ತು ಮುಖ್ಯ ಶೀರ್ಷಿಕೆ '3604' ಅಡಿಯಲ್ಲಿ ನಗರ ಸ್ಥಳಿಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ ಹಣವನ್ನು (2011–12ರಲ್ಲಿ ₹ 542 ಕೋಟಿ, 2012–13ರರಲ್ಲಿ ₹ 621 ಕೋಟಿ ಮತ್ತು 2013–14ರಲ್ಲಿ ₹ 190 ಕೋಟಿ) ಹೊರತುಪಡಿಸಿದೆ.

**ಪ್ರಮುಖ ವಿಭಾಗಗಳಲ್ಲಿ ವೆಚ್ಚ**

(₹ ಕೋಟಿಗಳಲ್ಲಿ)




## 3.3 ಬಂಡವಾಳ ವೆಚ್ಚ

2013–14 ರಲ್ಲಿ ರಾ.ಒ.ಆಂ.ಉ. ದ ಶೇಕಡ 2.93 ರಷ್ಟಿದ್ದ ಬಂಡವಾಳ ವೆಚ್ಚಗಳು (₹17,642 ಕೋಟಿ) ಆಯವ್ಯಯ ಅಂದಾಜಿಗಿಂತ (₹18,380 ಕೋಟಿ) ₹ 738 ಕೋಟಿಗಳಷ್ಟು ಕಡಿಮೆಯಾಗಿತ್ತು. ಈ ಕಡಿಮೆಯು ಯೋಜನಾ ವೆಚ್ಚದಲ್ಲಿ ₹ 666 ಕೋಟಿ ಮತ್ತು ಯೋಜನೇತರ ವೆಚ್ಚದಲ್ಲಿನ ₹72 ಕೋಟಿಗಳ ಇಳಿಕೆಯಿಂದ ಉಂಟಾಗಿದೆ.

3.3.1 ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ

2013–14 ರಲ್ಲಿ ಸರ್ಕಾರವು ಕೆಳಗಿನ ವಿಭಾಗಗಳಲ್ಲಿ ವಿವಿಧ ಯೋಜನೆಗಳ ಮೇಲೆ ₹ 17,642 ಕೋಟಿಗಳನ್ನು ವೆಚ್ಚಮಾಡಿದೆ. ಒಟ್ಟು ಬಂಡವಾಳ ವೆಚ್ಚದಲ್ಲಿ ವಿಭಾಗವಾರು ವೆಚ್ಚದ ಶತಾಂಶವನ್ನು ಕೆಳಗೆ ನೀಡಲಾಗಿದೆ.


(₹ ಕೋಟಿಗಳಲ್ಲಿ)

| ಕ್ರ.ಸಂ | ವಿಭಾಗ | ಮೊತ್ತ ₹ ಕೋಟಿಗಳಲ್ಲಿ | ಶತಾಂಶ |
|---|---|---|---|
| 1. | **ಸಾಮಾನ್ಯ ಸೇವೆಗಳು** : ಪೋಲಿಸ್, ಭೂಕಂದಾಯ ಇತ್ಯಾದಿ. | 501 | 2.84 |
| 2. | **ಸಾಮಾಜಿಕ ಸೇವೆಗಳು** : ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು, ಪ.ಜಾ/ಪ.ಪ ಕಲ್ಯಾಣ ಇತ್ಯಾದಿ. | 3,053 | 17.31 |
| 3. | **ಆರ್ಥಿಕ ಸೇವೆಗಳು** : ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ, ವಾಣಿಜ್ಯ ಸಾರಿಗೆ, ಇತ್ಯಾದಿ. | 13,393 | 75.91 |
| 4. | ಸಾಲ ಮತ್ತು ಮುಂಗಡಗಳು | 695 | 3.94 |
| | **ಒಟ್ಟು ಬಂಡವಾಳ ವೆಚ್ಚ (ರಾಜಸ್ವ ಲೆಕ್ಕದ ಹೊರಗೆ)** | **17,642** | **100.00** |

3.3.2 ಬಂಡವಾಳ ವೆಚ್ಚದ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಕ್ರ.ಸಂ | ವಿಭಾಗ | 2009-10 | 2010-11 | 2011-12 | 2012-13 | 2013-14 |
|---|---|---|---|---|---|---|
| 1. | **ಸಾಮಾನ್ಯ ಸೇವೆಗಳು** | 490 | 465 | 626 | 590 | 501 |
| 2. | **ಸಾಮಾಜಿಕ ಸೇವೆಗಳು** | 2,651 | 2,617 | 2,695 | 2,916 | 3,053 |
| 3. | **ಆರ್ಥಿಕ ಸೇವೆಗಳು** | 8,996 | 10,273 | 12,185 | 11,973 | 13,393 |
| 4. | **ಸಾಲ ಮತ್ತು ಮುಂಗಡಗಳು** | 982 | 1,738 | 1,815 | 1,102 | 695 |
| | **ಒಟ್ಟು** | **13,119** | **15,093** | **17,321** | **16,581** | **17,642** |




## ಅಧ್ಯಾಯ *IV*

# ಯೋಜನೆ ಮತ್ತು ಯೋಜನೇತರ ವೆಚ್ಚ

### 4.1 ವೆಚ್ಚದ ಹಂಚಿಕೆ

2013–14 ರಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚದಡಿ ₹ 106,832 ಕೋಟಿಗಳನ್ನು ಖರ್ಚುಮಾಡಿದ್ದು ಇದು ರಾ.ಒ.ಆಂ.ಉ.ದ ಶೇಕಡಾ 17.76 ರಷ್ಟಿದೆ. ಕೆಳಗಿನ ಪೈ ನಕ್ಷೆಯಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚದ ಹಂಚಿಕೆಯನ್ನು ಒಟ್ಟು ವೆಚ್ಚದಲ್ಲಿನ ಶತಾಂಶವಾಗಿ ಸೂಚಿಸಲಾಗಿದೆ.





### 4.2 ಯೋಜನಾ ವೆಚ್ಚ

2013–14 ರಲ್ಲಿ ಸರ್ಕಾರವು ಯೋಜನಾ ಕಾರ್ಯಕ್ರಮಗಳಿಗೆ ₹ 44,260 ಕೋಟಿಗಳನ್ನು ವೆಚ್ಚಮಾಡಿದ್ದು, ಇದು ಒಟ್ಟು ವೆಚ್ಚದ ಶೇಕಡಾ 41.43 ರಷ್ಟಿದೆ. ಈ ವೆಚ್ಚವು ಕೇಂದ್ರ ಪುರಸ್ಕೃತ ಯೋಜನೆಯಲ್ಲಿನ ರಾಜ್ಯದ ಪಾಲು (₹ 1,747 ಕೋಟಿ) ಸೇರಿದಂತೆ ರಾಜ್ಯ ಯೋಜನಾ ವೆಚ್ಚ ₹ 40,026ಕೋಟಿಗಳು ಮತ್ತು ₹ 4,234 ಕೋಟಿಗಳ ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿನ ಕೇಂದ್ರ ಪಾಲು ಮತ್ತು ಕೇಂದ್ರ ಯೋಜನಾ ಕಾರ್ಯಕ್ರಮಗಳ ಮೇಲಿನ ವೆಚ್ಚವನ್ನು ಒಳಗೊಂಡಿದೆ. ಒಟ್ಟು ವೆಚ್ಚಕ್ಕೆ ಮತ್ತು ರಾ.ಒ.ಆಂ.ಉ.ಕ್ಕೆ ಯೋಜನಾ ವೆಚ್ಚದ ಶೇಕಡಾವಾರನ್ನು ಸೂಚಿಸುವ ನಕ್ಷೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಒಟ್ಟು ವೆಚ್ಚ | 60,656 | 69,127 | 82,436 | 92,874 | 106,832 |
| ಯೋಜನಾ ವೆಚ್ಚ | 24,337 | 29,506 | 35,220 | 37,453 | 44,260 |
| ಒಟ್ಟು ವೆಚ್ಚದ ಶತಾಂಶವಾಗಿ ಯೋಜನಾ ವೆಚ್ಚ | 40.12 | 42.68 | 42.72 | 40.33 | 41.43 |
| ರಾ.ಒ.ಆಂ.ಉ.* | 335,747 | 380,871 | 434,270 | 522,650 | 601,633 |
| ರಾ.ಒ.ಆಂ.ಉ.ದ ಶತಾಂಶವಾಗಿ ಯೋಜನಾ ವೆಚ್ಚ | 7.25 | 7.75 | 8.11 | 7.17 | 7.36 |

* ರಾ.ಒ.ಆಂ.ಉ. ದ ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18.




4.2.1 ಬಂಡವಾಳ ಲೆಕ್ಕದಡಿ ಯೋಜನಾ ವೆಚ್ಚ

ಕಳೆದ 5 ವರ್ಷಗಳಲ್ಲಿ ಒಟ್ಟು ಬಂಡವಾಳ ವೆಚ್ಚದ ಶತಾಂಶವಾಗಿ ಬಂಡವಾಳ ವೆಚ್ಚ (ಯೋಜನೆ)ದ ಪ್ರವೃತ್ತಿಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಒಟ್ಟು ಬಂಡವಾಳ ವೆಚ್ಚ* | 13,119 | 15,093 | 17,321 | 16,581 | 17,642 |
| ಬಂಡವಾಳ ವೆಚ್ಚ* | 12,034 | 14,318 | 16,653 | 16,241 | 17,290 |
| ಒಟ್ಟು ವೆಚ್ಚದಲ್ಲಿ ಯೋಜನೆ ಬಂಡವಾಳ ವೆಚ್ಚ (ಯೋಜನೆ)ದ ಶತಾಂಶ* | 91.73 | 94.87 | 96.14 | 97.95 | 98.00 |

* ಬಂಡವಾಳ ವೆಚ್ಚವು ಬಂಡವಾಳ ವ್ಯಯ ಮತ್ತು ಸಾಲ ಮತ್ತು ಮುಂಗಡಗಳ ವಿತರಣೆಯನ್ನು ಒಳಗೊಂಡಿದೆ.

## 4.3 ಯೋಜನೇತರ ವೆಚ್ಚ


2013–14ರಲ್ಲಿ ಒಟ್ಟು ವೆಚ್ಚದ ಶೇಕಡ 58.57ರಷ್ಟಿರುವ ಯೋಜನೇತರ ವೆಚ್ಚವು ₹62,572 ಕೋಟಿಯಷ್ಟಿತ್ತು (ರಾಜಸ್ವದಡಿ ₹62,219 ಕೋಟಿ ಮತ್ತು ಬಂಡವಾಳದಡಿ ₹353ಕೋಟಿ). ಒಟ್ಟು ವೆಚ್ಚ ಮತ್ತು ರಾ.ಒ.ಆಂ.ಉ.ದಲ್ಲಿ ಯೋಜನೇತರ ವೆಚ್ಚದ ಶತಾಂಶವನ್ನು ನಕ್ಷೆಯ ರೂಪದಲ್ಲಿ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಒಟ್ಟು ವೆಚ್ಚ | 60,656* | 69,127 | 82,436 | 92,874 | 106,832 |
| ಯೋಜನೇತರ ವೆಚ್ಚ | 36,318 | 39,621 | 47,216 | 55,421 | 62,572 |
| ಒಟ್ಟು ಶತಾಂಶ ವೆಚ್ಚ | 59.88 | 57.32 | 57.28 | 60.00 | 58.57 |
| ರಾ.ಒ.ಆಂ.ಉ^^ | 337,516 | 398,893 | 458,903 | 525,444 | 601,633 |
| ಶತಾಂಶ ರಾ.ಒ.ಆಂ.ಉ. | 10.76 | 9.94 | 10.29 | 10.55 | 10.40 |

* ಕಂಡಿಕೆ 1.61 ರ ಕೆಳತನ ಅಡಿಟಿಪ್ಪಣಿ (B) ಓದುವುದು

^^ರಾ.ಒ.ಆಂ.ಉ.ದ ಆಕರ : ಮಧ್ಯಂತರ ವಿತ್ತೀಯ ಯೋಜನೆ 2014-18.




## 4.4 ಬದ್ಧ ವೆಚ್ಚಗಳು[(&)]

ಕಳೆದ ಐದು ವರ್ಷಗಳಲ್ಲಿ ರಾಜಸ್ವ ಸ್ವೀಕೃತಿ ಹಾಗೂ ರಾಜಸ್ವ ವೆಚ್ಚದ ಮೇಲೆ ಬದ್ಧ ವೆಚ್ಚಗಳ ಪ್ರವೃತ್ತಿಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಭಾಗಗಳು | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಬದ್ಧ ವೆಚ್ಚಗಳು ಇದರಲ್ಲಿ | 35,272 | 42,280 | 51,676 | 61,106 | 73,413 |
| 1) ಸಂಬಳ[(A)] | 4,456 | 5,281 | 6,068 | 7,183 | 8,065 |
| 2) ಬಡ್ಡಿ ಪಾವತಿ[(B)] | 5,213 | 5,641 | 6,604 | 6,833 | 7,837 |
| 3) ನಿವೃತ್ತಿ ವೇತನ ಪಾವತಿಗಳು | 3,408 | 4,070 | 5,436 | 7,227 | 9,152 |
| 4) ಸಹಾಯ ಧನಗಳು[(C)] | 4,118 | 6,303 | 7,390 | 10,709 | 13,323 |
| 5) ಸಹಾಯಾನುದಾನ[(D)] | 13,948 | 16,065 | 19,686 | 23,265 | 27,592 |
| 6) ಪಂ.ರಾ.ಸಂಸ್ಥೆಗಳು ಹಾಗು ನಗರ ಸ್ಥಳೀಯ ಸಂಸ್ಥೆಗಳಿಗೆ ಪಾಲುಗಳು | 2,472 | 2,976 | 4,248 | 4,009 | 5,019 |
| 7) ಸಾಮಾಜಿಕ ಭದ್ರತಾ ವಿಶ್ರಾಂತಿ ವೇತನ | 1,657 | 1,944 | 2,244 | 1,880 | 2,425 |
| ರಾಜಸ್ವ ಸ್ವೀಕೃತಿಗಳು | 49,156 | 58,206 | 69,806 | 78,176 | 89,543 |
| ರಾಜಸ್ವ ವೆಚ್ಚ | 47,537 | 54,034 | 65,115 | 76,293 | 89,190 |
| ರಾಜಸ್ವ ಸ್ವೀಕೃತಿಯಲ್ಲಿ ಬದ್ಧ ವೆಚ್ಚದ ಶತಾಂಶ | 72 | 73 | 74 | 78 | 82 |
| ರಾಜಸ್ವ ವೆಚ್ಚದಲ್ಲಿ ಬದ್ಧ ವೆಚ್ಚದ ಶತಾಂಶ | 74 | 78 | 79 | 80 | 82 |

(&) ಕರ್ನಾಟಕ ಸರ್ಕಾರವು ಫೆಬ್ರವರಿ 2014 ರಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆ 2014–18 ರಲ್ಲಿ ಇತರ ವೆಚ್ಚಗಳ ಜೊತೆಗೆ ಆಡಳಿತಾತ್ಮಕ ವೆಚ್ಚಗಳು ಹಾಗೂ ಅವ್ಯಕ್ತ ಸಹಾಯಧನ – ಇವುಗಳನ್ನು ಬದ್ಧ ವೆಚ್ಚಗಳೆಂದು ಪರಿಗಣಿಸಿಲ್ಲ.

(A) ಸಂಬಳ – ರಾಜ್ಯ ವಲಯದ ನೌಕರರ ಒಳಗೊಂಡು, ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟ ರಾಜ್ಯ ಸರ್ಕಾರಿ ಸಿಬ್ಬಂದಿಯ ಸಂಬಳ ಹೊರತುಪಡಿಸಿದೆ.

(B) ಅಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ ಪಾವತಿಯನ್ನು ಹೊರತುಪಡಿಸಿದೆ.

(C) ಸಹಾಯಧನಗಳು '106 – ಸಹಾಯಧನ' ಅಡಿಯಲ್ಲಿನ ವೆಚ್ಚವನ್ನು ಮಾತ್ರ ಸೂಚಿಸುತ್ತದೆ. ಪಂ.ರಾ.ಸಂಸ್ಥೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸಹಾಯಧನ ಹೊರತುಪಡಿಸಿದೆ.

(D) ಪಂ.ರಾ.ಸಂಸ್ಥೆಗಳ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಪಾಲುಗಳನ್ನು ಹೊರತುಪಡಿಸಿದೆ.

## ಅಧ್ಯಾಯ V

## ಧನ ವಿನಿಯೋಗ ಲೆಕ್ಕಗಳು

### 5.1 ಧನ ವಿನಿಯೋಗ ಲೆಕ್ಕಗಳ ಸಾರಾಂಶ

ಕರ್ನಾಟಕ ಸರ್ಕಾರದ 2013–14 ರ ಧನವಿನಿಯೋಗ ಲೆಕ್ಕಗಳು ಭಾರತ ಸಂವಿಧಾನ ಅನುಚ್ಛೇದ 204 ಮತ್ತು 205 ರ ಅನ್ವಯ ಅನುಮೋದಿಸಿದ ಧನವಿನಿಯೋಗ ಅಧಿನಿಯಮಕ್ಕೆ ಲಗತ್ತಿಸಿದ ಅನುಸೂಚಿಯಲ್ಲಿ ವಿವರಿಸಿದ ಅವಕಾಶಗಳಿಗೆ ಪ್ರತಿಯಾಗಿ ಮಾಡಿದ ವೆಚ್ಚದ ಲೆಕ್ಕಗಳನ್ನು ತೋರಿಸುತ್ತದೆ. ರಾಜ್ಯ ಸಂಚಿತ ನಿಧಿಯ ಪ್ರಮುಖ ವಿಭಾಗಗಳ ಧನವಿನಿಯೋಗ ಲೆಕ್ಕಗಳ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಕ್ರ.ಸಂ | ವೆಚ್ಚದ ಸ್ವರೂಪ | ಮೂಲ ಅನುದಾನ | ಪೂರಕ ಅನುದಾನ | ಪುನರ್ ವಿನಿಯೋಗ/ ಅಧ್ಯರ್ಪಣೆ | ಒಟ್ಟು | ವಾಸ್ತವ ವೆಚ್ಚ | ಉಳಿತಾಯ (–) ಹೆಚ್ಚಳ (+) |
|---|---|---|---|---|---|---|---|
| 1 | ರಾಜಸ್ವ<br>ಪುರಸ್ಕೃತ<br>ಪ್ರಭೃತ | 89,502<br>*9,139* | 7,752<br>*11* | (-) 3,286<br>*(-) 679* | 93,968<br>*8,471* | 82,071<br>*8,791* | (-) 11,897<br>*(+) 320* |
| 2 | ಬಂಡವಾಳ<br>ಪುರಸ್ಕೃತ<br>ಪ್ರಭೃತ | 19,639 | 4,303<br>… | (-) 843<br>… | 23,099 | 18,129<br>… | (-) 4,970<br>... |
| 3 | ಸಾರ್ವಜನಿಕ ಋಣ<br>ಪ್ರಭೃತ | *5,840* | ... | *(-) 2,017* | *3,823* | *3,823* | ... |
| 4 | ಸಾಲಗಳು ಮತ್ತು ಮುಂಗಡಗಳು<br>ಪುರಸ್ಕೃತ | 996 | 132 | (-) 91 | 1,037 | 903 | (-) 134 |
| | **ಒಟ್ಟು** | **1,25,116** | **12,198** | **(-) 6,916** | **1,30,398** | **1,13,717** | **(-) 16,681** |

5.1.1 ಉಳಿತಾಯ / ಹೆಚ್ಚಳಗಳ ಅನುದಾನವಾರು ವಿವರಗಳು

ಕರ್ನಾಟಕ ಸರ್ಕಾರದ 2013–14ರ ಧನ ವಿನಿಯೋಗ ಲೆಕ್ಕಗಳ–ಅನುದಾನವಾರು ಉಳಿತಾಯ/ಹೆಚ್ಚಳಗಳ ವಿವರಗಳು ಕೆಳಕಂಡಂತಿದೆ.

(₹ ಕೋಟಿಗಳಲ್ಲಿ)

| ಅನುದಾನ ಸಂಖ್ಯೆ ಮತ್ತು ಹೆಸರು | | ರಾಜಸ್ವ | | ಬಂಡವಾಳ | |
|---|---|---|---|---|---|
| ಕೆಳಗಿನ ಅನುದಾನಗಳಲ್ಲಿ ಉಳಿತಾಯಗಳು | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 01 | ಕೃಷಿ ಮತ್ತು ತೋಟಗಾರಿಕೆ | 15,53.19 | *0.16* | 31.24 | ... |
| 02 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 2,07.09 | *0.10* | 38.96 | ... |
| 03 | ಆರ್ಥಿಕ | 1,16.64 | *0.38* | 14.30 | ... |
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 2,50.41 | *24.94* | 90.10 | ... |
| 05 | ಗೃಹ ಮತ್ತು ಸಾರಿಗೆ | 5,20.60 | ... | 57.90 | ... |
| 06 | ಮೂಲ ಸೌಕರ್ಯ ಅಭಿವೃದ್ಧಿ | 8.97 | ... | 1,40.04 | ... |
| 07 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ | 29,61.52 | *0.41* | 20,42.93 | ... |
| 08 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 59.59 | ... | 0.07 | ... |
| 09 | ಸಹಕಾರ | 36.09 | ... | 1.25 | ... |
| 10 | ಸಮಾಜ ಕಲ್ಯಾಣ | 10,25.07 | ... | 4,04.32 | ... |

(₹ ಕೋಟಿಗಳಲ್ಲಿ)

| ಅನುದಾನ ಸಂಖ್ಯೆ ಮತ್ತು ಹೆಸರು | | ರಾಜಸ್ವ | | ಬಂಡವಾಳ | |
|---|---|---|---|---|---|
| ಕೆಳಗಿನ ಅನುದಾನಗಳಲ್ಲಿ ಉಳಿತಾಯಗಳು | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 4,56.50 | ... | 25.48 | ... |
| 12 | ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು | 36.55 | ... | 48.28 | ... |
| 13 | ಆಹಾರ ಮತ್ತು ನಾಗರೀಕ ಸರಬರಾಜು | 3,65.47 | *0.03* | … | ... |
| 14 | ಕಂದಾಯ | 5,33.43 | *26.99* | 15.93 | ... |
| 15 | ಮಾಹಿತಿ ತಂತ್ರಜ್ಞಾನ | 49.94 | ... | … | ... |
| 16 | ವಸತಿ | 1,54.73 | ... | … | ... |
| 17 | ಶಿಕ್ಷಣ | 26,64.47 | ... | 1,34.88 | ... |
| 18 | ವಾಣಿಜ್ಯ ಮತ್ತು ಕೈಗಾರಿಕೆಗಳು | 1,35.47 | ... | 1,32.45 | ... |
| 19 | ನಗರಾಭಿವೃದ್ಧಿ | 17,68.58 | ... | 2,77.37 | ... |
| 20 | ಲೋಕೋಪಯೋಗಿ | 2,89.45 | ... | 9,37.23 | ... |
| 21 | ಜಲ ಸಂಪನ್ಮೂಲ | 2,94.73 | ... | 12,60.62 | ... |
| 22 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 12,84.72 | ... | 1,33.97 | ... |
| 23 | ಕಾರ್ಮಿಕ | 1,63.08 | ... | 7.90 | ... |
| 24 | ಇಂಧನ | 6.59 | *0.03* | 2,64.18 | ... |
| 25 | ಕನ್ನಡ ಮತ್ತು ಸಂಸ್ಕೃತಿ | 34.01 | ... | 0.52 | ... |
| 26 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 95.37 | ... | … | ... |
| 27 | ಕಾನೂನು | 96.48 | ... | … | ... |
| 28 | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ | 13.94 | *1.10* | … | ... |
| *29* | ಋಣ ನಿರ್ವಹಣೆ | ... | *6,59.67* | 0.11 | *20,16.96* |
| ಕೆಳಗಿನ ಅನುದಾನಗಳಲ್ಲಿ ಹೆಚ್ಚಳ | | ಪುರಸ್ಕೃತ | ಪ್ರಭೃತ | ಪುರಸ್ಕೃತ | ಪ್ರಭೃತ |
| 08 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | … | *3,55.39* | … | ... |
| 26 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | ... | ... | 20.42 | ... |


### 5.2 ಉಳಿತಾಯ ಪ್ರವೃತ್ತಿ

ಧನವಿನಿಯೋಗ ಲೆಕ್ಕಗಳಲ್ಲಿ ಉಳಿತಾಯವು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಧನವಿನಿಯೋಗ ಅಧಿನಿಯಮದಲ್ಲಿ ನೀಡಿದ ಅನೇಕ ಉದ್ದೇಶಿತ ವೆಚ್ಚಗಳ ಅವಕಾಶಗಳನ್ನು ಬಳಸದಿರುವುದನ್ನು ತೋರಿಸುತ್ತದೆ. ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳನ್ನು ಉಲ್ಲೇಖಿಸಿ ಉಳಿತಾಯಗಳನ್ನು ಲೆಕ್ಕ ಮಾಡಲಾಗುವುದು. ಇದರಲ್ಲಿ ಅಧ್ಯರ್ಪಣೆ ಮಾಡಿದ ಮೊತ್ತವನ್ನು ಹೊರತುಪಡಿಸಿ (ಉಳಿತಾಯವೆಂದು ಪರಿಗಣಿಸಿ), ಕಳೆದ ಐದು ವರ್ಷಗಳ ಉಳಿತಾಯ ಪ್ರವೃತ್ತಿಯನ್ನು ಈ ಕೆಳಗೆ ನೀಡಲಾಗಿದೆ. ಪುರಸ್ಕೃತ ಮತ್ತು ಪ್ರಭೃತ ಹಾಗು ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಾದ ಉಳಿತಾಯ ಪ್ರವೃತ್ತಿಗಳನ್ನು ನಕ್ಷೆಯ ರೂಪದಲ್ಲಿ ನೀಡಲಾಗಿದೆ.

## ಸತತ ಉಳಿತಾಯಗಳು (ರಾಜಸ್ವ ವಿಭಾಗ)

(₹ ಕೋಟಿಗಳಲ್ಲಿ)


| ವರ್ಷ | ರಾಜಸ್ವ ವಿಭಾಗ | | | | ಬಂಡವಾಳ ವಿಭಾಗ | | | |
|---|---|---|---|---|---|---|---|---|
| | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ |
| 2009-10 | 50,354 | 43,840 | 6,514 | 12.94 | 16,597 | 13,659 | 2,938 | 17.70 |
| 2010-11 | 55,257 | 48,074 | 7,183 | 13.00 | 19,193 | 15,736 | 3,457 | 18.01 |
| 2011-12 | 65,469 | 59,056 | 6,413 | 9.80 | 22,223 | 18,000 | 4,223 | 19.00 |
| 2012-13 | 88,265 | 69,672 | 18,593 | 21.06 | 23,339 | 17,608 | 5,731 | 24.56 |
| 2013-14 | 97,254 | 82,071 | 15,183 | 15.61 | 25,071 | 19,031 | 6,040 | 24.09 |




## ಸತತ ಉಳಿತಾಯಗಳು – (ರಾಜಸ್ವ ವಿಭಾಗ)

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ವಿಭಾಗ | | | | ಬಂಡವಾಳ ವಿಭಾಗ | | | |
|---|---|---|---|---|---|---|---|---|
| | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ | ಅವಕಾಶ | ವೆಚ್ಚ | ಉಳಿತಾಯ | ಅವಕಾಶದ ಶತಾಂಶವಾಗಿ |
| 2009-10 | *5,765* | *5,630* | *135* | *2.34* | *3,683* | *2,308* | *1,375* | *37.33* |
| 2010-11 | *6,930* | *6,298* | *632* | *9.12* | *3,813* | *2,807* | *1,006* | *26.38* |
| 2011-12 | *7,579* | *6,453* | *1,126* | *14.86* | *4,473* | *3,320* | *1,153* | *25.78* |
| 2012-13 | *9,120* | *8,942* | *178* | *1.95* | *5,670* | *3,733* | *1,937* | *34.16* |
| 2013-14 | *9,149* | *8,791* | *358* | *3.91* | *5,840* | *3,823* | *2,017* | *34.54* |



## 5.3 ಗಣನಾರ್ಹ ಉಳಿತಾಯಗಳು :

ಅನುದಾನದಡಿಯ ಗಣನಾರ್ಹ ಉಳಿತಾಯಗಳು ಕೆಲವು ಯೋಜನೆಗಳ / ಕಾರ್ಯಕ್ರಮಗಳ ಅನನುಷ್ಠಾನ ಅಥವಾ ನಿಧಾನಗತಿಯ ಅನುಷ್ಠಾನವನ್ನು ಅಥವಾ ಆಯವ್ಯಯದಲ್ಲಿ ಅಧಿಕವಾದ ಹಂಚಿಕೆಯನ್ನು ಸೂಚಿಸುತ್ತದೆ. ಕಳೆದ ಐದು ವರ್ಷಗಳಲ್ಲಿ ರಾಜಸ್ವ ಮತ್ತು ಬಂಡವಾಳ ವಿಭಾಗಗಳಲ್ಲಿ ಸತತವಾಗಿ ಮತ್ತು ಗಣನೀಯವಾಗಿ ನಿವ್ವಳ ಅವಕಾಶದ ಶೇಕಡ 10ಕ್ಕಿಂತಲೂ ಹೆಚ್ಚು ಉಳಿತಾಯ ಕಂಡು ಬಂದ ಕೆಲವು ಅನುದಾನಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಅನುದಾನ ಸಂಖ್ಯೆ | ರಾಜಸ್ವ ವಿಭಾಗ | 2009-10 | 2010-11 | 2011-12 | 2012-13 | 2013-14 |
|---|---|---|---|---|---|---|
| 01 | ಕೃಷಿ ಮತ್ತು ತೋಟಗಾರಿಕೆ | 32 | 34 | 34 | 39 | 31 |
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ | 17 | 17 | 21 | 28 | 26 |
| 19 | ನಗರಾಭಿವೃದ್ಧಿ | 27 | 11 | 11 | 31 | 23 |
| 20 | ಲೋಕೋಪಯೋಗಿ | 18 | 12 | 13 | 12 | 11 |
| 23 | ಕಾರ್ಮಿಕ | 20 | 32 | 40 | 29 | 28 |
| 25 | ಕನ್ನಡ ಮತ್ತು ಸಂಸ್ಕೃತಿ | 24 | 11 | 30 | 16 | 13 |
| 26 | ಯೋಜನೆ, ಸಾಂಖ್ಯಿಕ, ವಿಜ್ಞಾನ ಹಾಗೂ ತಂತ್ರಜ್ಞಾನ | 21 | 28 | 30 | 41 | 40 |
| | **ಬಂಡವಾಳ ವಿಭಾಗ** | | | | | |
| 01 | ಕೃಷಿ ಮತ್ತು ತೋಟಗಾರಿಕೆ | 54 | 55 | 39 | 31 | 28 |
| 02 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 38 | 44 | 27 | 34 | 18 |
| 07 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ | 26 | 13 | 17 | 17 | 51 |
| 10 | ಸಮಾಜ ಕಲ್ಯಾಣ | 10 | 24 | 13 | 22 | 31 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 35 | 34 | 35 | 70 | 19 |
| 19 | ನಗರಾಭಿವೃದ್ಧಿ | 16 | 21 | 22 | 21 | 25 |
| 20 | ಲೋಕೋಪಯೋಗಿ | 16 | 17 | 18 | 16 | 16 |
| 21 | ಜಲ ಸಂಪನ್ಮೂಲ | 20 | 15 | 12 | 23 | 17 |
| 23 | ಕಾರ್ಮಿಕ | 23 | 17 | 16 | 20 | 33 |
| *29* | ಋಣ ನಿರ್ವಹಣೆ* | *37* | *26* | *26* | *34* | *35* |

* ಪ್ರಭೃತ ವಿನಿಯೋಗ – ಬಂಡವಾಳ ವಿಭಾಗ

## 5.4 ಪೂರಕ ಅಂದಾಜುಗಳು

2013–14 ರಲ್ಲಿ ಭಾರತ ಸಂವಿಧಾನದ ಅನುಚ್ಛೇದ 205 ರ ಪ್ರಕಾರ ₹12,198 ಕೋಟಿಗಳಷ್ಟು ಹೆಚ್ಚುವರಿ ಅನುದಾನವನ್ನು ಪೂರಕ ಅಂದಾಜುಗಳ ಮುಖಾಂತರ ಪಡೆಯಲಾಗಿದೆ. ಈ ಮೊತ್ತವನ್ನು ಸಂಪೂರ್ಣವಾಗಿ ಉಪಯೋಗಿಸದ ಕಾರಣ ₹ 3,777 ಕೋಟಿಗಳು ಹೆಚ್ಚಾಗಿರುವುದು ಸಾಬೀತಾಗಿತ್ತು. ₹10 ಕೋಟಿಗಿಂತ ಹೆಚ್ಚಾದ ಅನಗತ್ಯ ಉಳಿತಾಯ ಅಥವಾ ಹೆಚ್ಚಳದ ಕೆಲವು ಪ್ರಕರಣಗಳಲ್ಲಿ ಭಾಗಶ: ಮರು ಹೊಂದಾಣಿಕೆ / ಅಧ್ಯರ್ಪಿಸಲಾದ ಕೆಲವು ಪ್ರಕರಣಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ

## ಅನಗತ್ಯ ಪೂರಕ ಅಂದಾಜುಗಳು

(₹ ಕೋಟಿಗಳಲ್ಲಿ)

| ಅನು. ಸಂಖ್ಯೆ | ಪ್ರಧಾನ ಶೀರ್ಷಿಕೆ | ಮೂಲ | ಪೂರಕ | ವಾಸ್ರವ | ಉಳಿತಾಯ |
|---|---|---|---|---|---|
| 01 | 2851-00-107-1-45-059 | 6.42 | 12.91 | 6.23 | 13.10 |
| 07 | 2501-01-198-6-01-300 | 133.86 | 134.35 | 94.43 | 173.78 |
| 07 | 2505-60-196-6-04-300 | 1512.80 | 127.51 | 265.04 | 1375.27 |
| 07 | 2515-00-101-0-80-059 | 15.00 | 20.99 | 7.64 | 28.35 |
| 07 | 2515-00-198-6-10-300 | 471.48 | 21.32 | 168.14 | 324.66 |
| 14 | 2506-00-101-5-10-125 | 10.00 | 26.72 | 0.56 | 36.16 |
| 19 | 3604-00-191-7-01-101 | 4.89 | 42.53 | 2.56 | 44.86 |
| 22 | 2211-00-003-0-04-071 | 0.15 | 10.00 | 0.02 | 10.13 |

## ಅಧಿಕವಾದ ಪೂರಕ ಅಂದಾಜುಗಳು

(₹ ಕೋಟಿಗಳಲ್ಲಿ)

| ಅನು. ಸಂಖ್ಯೆ | ಪ್ರಧಾನ ಶೀರ್ಷಿಕೆ | ಮೂಲ | ಪೂರಕ | ವಾಸ್ರವ | ಉಳಿತಾಯ |
|---|---|---|---|---|---|
| 01 | 2401-00-800-1-40-059 | 152.25 | 350.00 | 336.60 | 165.65 |
| 01 | 2401-00-800-1-57-059 | 136.76 | 161.20 | 184.93 | 113.03 |
| 01 | 2402-00-800-0-06-059 | 47.00 | 18.53 | 51.00 | 14.53 |
| 02 | 2403-00-800-0-30-101 | 49.14 | 69.75 | 54.37 | 64.52 |
| 04 | 2015-00-105-0-01-059 | 0.01 | 50.00 | 33.10 | 16.91 |
| 05 | 3055-00-190-0-05-106 | 84.78 | 36.37 | 96.37 | 24.78 |
| 07 | 2515-00-196-6-09-300 | 46.01 | 22.49 | 55.83 | 12.67 |
| 07 | 2515-00-197-6-09-300 | 92.02 | 44.99 | 111.67 | 25.34 |
| 07 | 2515-00-198-6-09-300 | 322.09 | 157.44 | 390.84 | 88.69 |
| 07 | 5054-04-337-7-01-132 | 120.82 | 815.38 | 740.65 | 195.55 |
| 17 | 2202-01-196-6-01-300 | 186.58 | 335.36 | 464.04 | 57.90 |
| 17 | 2203-00-107-1-00-422 | 5.79 | 45.00 | 25.64 | 25.15 |
| 18 | 6860-04-190-1-16-394 | 0.01 | 48.00 | 21.87 | 26.14 |
| 19 | 3604-00-191-7-51-101 | 203.48 | 246.47 | 246.57 | 203.38 |
| 20 | 3054-03-337-0-05-200 | 245.00 | 25.00 | 249.11 | 20.89 |
| 20 | 5054-04-800-2-02-172 | 120.00 | 100.00 | 185.76 | 34.24 |
| 22 | 4210-03-105-1-02-422 | 17.00 | 28.00 | 31.78 | 13.22 |

# ಅಧ್ಯಾಯ VI

## ಆಸ್ತಿ ಮತ್ತು ಜವಾಬ್ದಾರಿಗಳು

### 6.1 ಆಸ್ತಿಗಳು

ಸರ್ಕಾರದ ಆಸ್ತಿ ಮತ್ತು ಜವಾಬ್ದಾರಿಗಳ ವಿವರಗಳನ್ನು ಹಣಕಾಸು ಲೆಕ್ಕಗಳು ಸಂಪುಟ–1ರ ವಿವರಣಾ ಪಟ್ಟಿ–1ರಲ್ಲಿ ತೋರಿಸಲಾಗಿದೆ. ಪ್ರಸ್ತುತ ಲೆಕ್ಕ ಪತ್ರ ನಮೂನೆಯು ಜಮೀನು, ಕಟ್ಟಡಗಳು ಮುಂತಾದ ಸರ್ಕಾರಿ ಆಸ್ತಿಗಳ ಮೌಲ್ಯವನ್ನು (ಸ್ವಾಧೀನತೆ / ಕೊಂಡ ವರ್ಷದ ಹೊರತು) ಸುಲಭವಾಗಿ ಬಿಂಬಿಸುವುದಿಲ್ಲ. 31 ಮಾರ್ಚ್ 2014ರ ಅಂತ್ಯಕ್ಕೆ ಸರ್ಕಾರಿ ಆಸ್ತಿಯ ಮೌಲ್ಯಗಳು ಪ್ರಧಾನವಾಗಿ ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು (₹14,630 ಕೋಟಿ), ಕ್ರಮವೃದ್ಧಿಯ ಬಂಡವಾಳ ವೆಚ್ಚ (₹136,419 ಕೋಟಿಗಳು) ಮತ್ತು ಸಾಲಗಳು ಮತ್ತು ಮುಂಗಡಗಳು (₹12,729 ಕೋಟಿ), ಮುಂಗಡಗಳು (₹7.36 ಕೋಟಿ) ಮತ್ತು ಇರಸಾಲು (₹488.30 ಕೋಟಿ) ಗಳನ್ನು ಒಳಗೊಂಡಿತ್ತು.

2013–14ನೇ ಸಾಲಿನ ಅಂತ್ಯಕ್ಕೆ ಸಾರ್ವಜನಿಕ ಉದ್ದಿಮೆಗಳಲ್ಲಿ ಷೇರು ಬಂಡವಾಳವಾಗಿ ಸರ್ಕಾರದ ಹೂಡಿಕೆಯು ₹55,048 ಕೋಟಿಗಳಷ್ಟಿತ್ತು. ಆದರೆ ಈ ಸಾಲಿನಲ್ಲಿ ಹೂಡಿಕೆಗಳ ಮೇಲೆ ಪಡೆದ ಡಿವಿಡೆಂಡುಗಳು ₹ 55 ಕೋಟಿಯಷ್ಟಿತ್ತು (ಶೇಕಡ 0.09). 2013–14ರಲ್ಲಿ ಹೂಡಿಕೆಗಳು ₹ 5,584 ಕೋಟಿಯಷ್ಟು ಹೆಚ್ಚಾಗಿದ್ದರೆ, ಡಿವಿಡೆಂಡುಗಳು ₹ 1 ಕೋಟಿಯಷ್ಟು ಮಾತ್ರ ಕಡಿಮೆಯಾಗಿತ್ತು. ಭಾರತೀಯ ರಿಜರ್ವ್ ಬ್ಯಾಂಕ್‌ನಲ್ಲಿ 31ನೇ ಮಾರ್ಚ್ 2013ರ ಅಂತ್ಯಕ್ಕೆ ನಗದು ಶಿಲ್ಕು ₹68 ಕೋಟಿಯಷ್ಟಿದ್ದು, ಮಾರ್ಚ್ 2014ರ ಅಂತ್ಯಕ್ಕೆ ₹86 ಕೋಟಿಗೆ ಏರಿಕೆಯಾಗಿತ್ತು.

### 6.2 ಋಣ ಮತ್ತು ಜವಾಬ್ದಾರಿಗಳು

ಭಾರತ ಸಂವಿಧಾನದ ಅನುಚ್ಛೇದ 293(1)ರ ಅಧಿಕಾರದನ್ವಯ ರಾಜ್ಯ ಸರ್ಕಾರಗಳು, ಸಂಚಿತ ನಿಧಿಯ ಭದ್ರತೆಯ ಮೇಲೆ, ರಾಜ್ಯ ವಿಧಾನ ಮಂಡಲವು ಕಾಲ ಕಾಲಕ್ಕೆ ನಿಗದಿ ಪಡಿಸಿದ ಮಿತಿಗೆ ಅನುಗುಣವಾಗಿ ಸಾಲಗಳನ್ನು ಪಡೆಯಬಹುದಾಗಿದೆ. ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರದ ಸಾರ್ವಜನಿಕ ಋಣ ಮತ್ತು ಒಟ್ಟು ಜವಾಬ್ದಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷ | ರಾ.ಒ.ಆಂ.ಉ.* | ಸಾರ್ವಜನಿಕ ಋಣ | ರಾಒಆಂಉ ಶತಾಂಶ | ಸಾರ್ವಜನಿಕ ಲೆಕ್ಕ^ | ರಾಒಆಂಉ ಶತಾಂಶ | ಒಟ್ಟು ಜವಾಬ್ದಾರಿಗಳು^ | ರಾಒಆಂಉ ಶತಾಂಶ |
|---|---|---|---|---|---|---|---|
| 2009-10 | 335,747 | 55,370 | 16.49 | 28,112 | 8.37 | 83,482 | 24.86 |
| 2010-11 | 380,871 | 59,277 | 15.56 | 32,666 | 8.58 | 91,943 | 24.14 |
| 2011-12 | 434,270 | 65,315 | 15.04 | 37,715 | 8.68 | 103,030 | 23.72 |
| 2012-13 | 522,650 | 75,052 | 14.36 | 41,715 | 7.98 | 116,767 | 22.34 |
| 2013-14 | 601,633 | 88,522 | 14.71 | 46,796 | 7.78 | 135,318 (&) | 22.49 |

* {ರಾ.ಒ.ಆಂ.ಉ. ದ 2013–14 ಆಕರ : ಮಧ್ಯಂತರ ವಿತ್ತೀಯ ಯೋಜನೆ 2014–18 ಮತ್ತು 2009–10 ರಿಂದ 2012–13 ಕರ್ನಾಟಕ ವಿತ್ತೀಯ ಸಮೀಕ್ಷೆ 2013–14}.

^ ಹಣಕಾಸು ಲೆಕ್ಕಗಳ ವಿವರಣಾ ಪಟ್ಟಿ 6(i) ರಲ್ಲಿ ತೋರಿಸಿರುವಂತೆ ಸಣ್ಣ ಉಳಿತಾಯಗಳು ಮತ್ತು ಇತರೆ ಜವಾಬ್ದಾರಿಗಳ ನಿವ್ವಳವನ್ನು ತೋರಿಸುತ್ತದೆ.

& ವರ್ಷ 2013–14ಕ್ಕೆ ಕರ್ನಾಟಕ ಸರ್ಕಾರವು ಒದಗಿಸಿಲ್ಲದ ಮತ್ತು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಅಧಿನಿಯಮ 2014ರ ಪ್ರಕಾರ ಗಣನೆಗ ತೆಗೆದುಕೊಂಡ ಜವಾಬ್ದಾರಿಗಳ ಮೊತ್ತವನ್ನು ಹೊರತುಪಡಿಸಿದೆ.

2012–13ಕ್ಕೆ ಹೋಲಿಸಿದರೆ ಸಾರ್ವಜನಿಕ ಋಣ ಮತ್ತು ಇತರ ಜವಾಬ್ದಾರಿಗಳಲ್ಲಿ ₹18,552 ಕೋಟಿಗಳ (ಶೇಕಡ 15.88) ನಿವ್ವಳ ಹೆಚ್ಚಳವಿದೆ.

ಋಣ ಮತ್ತು ಇತರ ಜವಾಬ್ದಾರಿಗಳ ಮೇಲಿನ ಬಡ್ಡಿ ಪಾವತಿಗಳು ₹7,837 ಕೋಟಿಗಳಷ್ಟಿದ್ದು, ಇದು ರಾಜಸ್ವ ವೆಚ್ಚದ ಸುಮಾರು ಶೇಕಡ 8.78 ರಷ್ಟಾಗುತ್ತದೆ. ಸಾರ್ವಜನಿಕ ಋಣದ ಮೇಲಿನ ಬಡ್ಡಿ ಪಾವತಿಗಳು ₹6,353 ಕೋಟಿಗಳಷ್ಟಿದ್ದು, ಇದರಲ್ಲಿ ಆಂತರಿಕ ಋಣ ₹5,598 ಕೋಟಿ ಮತ್ತು ಕೇಂದ್ರಸಾಲ ಮತ್ತು ಮುಂಗಡಗಳು ₹755 ಕೋಟಿಗಳು ಒಳಗೊಂಡಿವೆ. ಸಣ್ಣ ಉಳಿತಾಯಗಳು, ಭವಿಷ್ಯ ನಿಧಿ ಮತ್ತು ಇತರೆ ಜವಾಬ್ದಾರಿಗಳ ಮೇಲಿನ ಬಡ್ಡಿ ಪಾವತಿಗಳು ₹1,485 ಕೋಟಿ ಮತ್ತು ಮೀಸಲು ನಿಧಿಗಳ ಮೇಲಿನ ಬಡ್ಡಿ ಪಾವತಿಗಳು ₹0.08 ಕೋಟಿಯಷ್ಟಿವೆ. 2012–13ಕ್ಕಿಂತಲೂ 2013–14 ರಲ್ಲಿ ಬಡ್ಡಿ ಪಾವತಿ ಮೇಲಿನ ವೆಚ್ಚವು ₹1,004 ಕೋಟಿಗಳಷ್ಟು ಹೆಚ್ಚಾಗಿದೆ.

### 6.2.1 ರಾಜ್ಯ ಭವಿಷ್ಯ ನಿಧಿಗಳು

(₹ ಕೋಟಿಗಳಲ್ಲಿ)

| ವರ್ಷ | ಆರಂಭಿಕ ಶಿಲ್ಕು | ಸ್ವೀಕೃತಿಗಳು* | ಪಾವತಿಗಳು | ವರ್ಷದ ನಿವ್ವಳ ಸೇರ್ಪಡೆ | ಅಂತಿಮ ಶಿಲ್ಕು | ಭವಿಷ್ಯ ನಿಧಿ ಶಿಲ್ಕಿನ ಮೇಲಿನ ಬಡ್ಡಿ |
|---|---|---|---|---|---|---|
| 2009-10 | 5,019 | 1,418 | 452 | 966 | 5,985 | 420 |
| 2010-11 | 5,985 | 1,664 | 667 | 997 | 6,982@ | 490 |
| 2011-12 | 6,981@ | 1,917 | 1,059 | 858 | 7,839 | 580 |
| 2012-13 | 7,839 | 2,248 | 1,290 | 958 | 8,797 | 662 |
| 2013-14 | 8797 | 2,558 | 1,371 | 1,187 | 9,984 | 784 |

(*) ಕೋಷ್ಟಕದ ಕೊನೆಯ ಸಾಲಿನಲ್ಲಿ ನಮೂದಿಸಿದ ಬಡ್ಡಿಯನ್ನು ಒಳಗೊಂಡಿದೆ.


(@) ಪೂರ್ಣಾಂಶದಿಂದಾಗಿ ₹1 ಕೋಟಿಯಷ್ಟು ವ್ಯತ್ಯಾಸವಿದೆ.

### 6.2.2 ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ

ಕೆಳಗಿನ ಕೋಷ್ಟಕವು ಕಳೆದ ಐದು ವರ್ಷಗಳ ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿಯನ್ನು ಸೂಚಿಸುತ್ತದೆ. ಸರ್ಕಾರಿ ಜವಾಬ್ದಾರಿಗಳ ಪ್ರವೃತಿಯನ್ನು ತೋರಿಸುವ ನಕ್ಷೆಯನ್ನು ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷ | ಆಂತರಿಕ ಋಣ | ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳು | ಸಣ್ಣ ಉಳಿತಾಯಗಳು ಮತ್ತು ಭವಿಷ್ಯ ನಿಧಿ | ಇತರೆ ಜವಾಬ್ದಾರಿಗಳು | ಒಟ್ಟು ಜವಾಬ್ದಾರಿಗಳು |
|---|---|---|---|---|---|
| 2009-10 | 45,468 | 9,902 | 11,177 | 16,935 | 83,482 |
| 2010-11 | 48,762 | 10,515 | 12,784 | 19,882 | 91,943 |
| 2011-12 | 54,333 | 10,982 | 14,182 | 23,533 | 103,030 |
| 2012-13 | 63,418 | 11,634 | 15,914 | 25,801 | 116,767 |
| 2013-14 | 76,428 | 12,094 | 18,021 | 28,775 | 135,318 |




ಕರ್ನಾಟಕ ವಿತ್ತೀಯ ಜವಾಬ್ದಾರಿ ಅಧಿನಿಯಮ 2002ರ ಅನ್ವಯ 2013–14ರ ಆರ್ಥಿಕ ವರ್ಷದ ಅಂತ್ಯಕ್ಕೆ ಒಟ್ಟು ಜವಾಬ್ದಾರಿಯು ರಾ.ಒ.ಆಂ.ಉ.ದ ಶೇಕಡ 22.22 ರಷ್ಟಿರಲು ಅವಕಾಶವಿದೆ. 2013–14ರ ಅಂತ್ಯಕ್ಕೆ ಬಾಕಿ ಇದ್ದ ಋಣವು ರಾ.ಒ.ಆಂ.ಉ. ದ ಶೇಕಡ 22.49 ರಷ್ಟಿತ್ತು.

### 6.2.3 ಸಾದಿಲ್ವಾರು ನಿಧಿ

ಸರ್ಕಾರವು ಭರಿಸಬೇಕಾದ ಅನಿರೀಕ್ಷಿತ ವೆಚ್ಚಗಳನ್ನು ಪೂರೈಸಲು ಸಾದಿಲ್ವಾರು ನಿಧಿಯ ಸ್ಥಾಪನೆಯಾಗಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಈ ನಿಧಿಯ ಬಳಕೆಯ ವಿವರಣೆಗಳನ್ನು ಕೆಳಗೆ ನೀಡಲಾಗಿದೆ.

| ವಿವರಣೆಗಳು | 2009-10 | 2010-11 | 2011-12 | 2012-13 | 2013-14 |
|---|---|---|---|---|---|
| ಸಾದಿಲ್ವಾರು ನಿಧಿಯಿಂದ ಹಣ ಪಡೆದ ಸಂದರ್ಭಗಳ ಸಂಖ್ಯೆ | 9 | 24 | 15 | 9 | 9 |
| ಸಾದಿಲ್ವಾರು ನಿಧಿಯಿಂದ ಪಡೆದ ಒಟ್ಟು ಮೊತ್ತ ₹ಕೋಟಿಗಳಲ್ಲಿ | 38.18 | 57.28 | 46.61 | 46.00 | 56.89 |
| ಆಯವ್ಯಯದ ಅಂದಾಜಿಗೆ ಸಾದಿಲ್ವಾರು ನಿಧಿಯಿಂದ ಪಡೆದ ಹಣದ ಪ್ರತಿಶತ | 0.05 | 0.06 | 0.05 | 0.04 | 0.04 |

## 6.3 ಖಾತರಿಗಳು

ಕರ್ನಾಟಕ ಖಾತರಿಗಳ ಮಿತಿ ಅಧಿನಿಯಮ 1999 ರಲ್ಲಿ ನಿಗದಿಪಡಿಸಿದ ಮಿತಿಯಂತೆ ಯಾವುದೇ ವರ್ಷದ ಏಪ್ರಿಲ್ ಒಂದರಂದು ಬಾಕಿ ಇರುವ ಸರ್ಕಾರಿ ಖಾತರಿಗಳ ಮೊತ್ತವು ಪ್ರಧಾನ ಮಹಾಲೇಖಪಾಲರ ಪುಸ್ತಕದಲ್ಲಿ ತೋರಿಸಿರುವ ಹಿಂದಿನ ಎರಡು ವರ್ಷಗಳ ರಾಜ್ಯದ ರಾಜಸ್ವ ಸ್ವೀಕೃತಿಯ ಶೇಕಡ 80ಕ್ಕೆ ಮೀರದಂತೆ ಇರಬೇಕು. ಹಣಕಾಸು ಲೆಕ್ಕದಲ್ಲಿ ತೋರಿಸಿರುವ ಸರ್ಕಾರದ ಬಾಕಿ ಇರುವ ಗರಿಷ್ಠ ಖಾತರಿಗಳ ಮೊತ್ತವು ಅಧಿನಿಯಮದಲ್ಲಿ ನಿಗಡಿಪಡಿಸಿದ ಮಿತಿಯ ಒಳಗಿದೆ.

ಶಾಸನ ಬದ್ಧ ನಿಗಮಗಳು, ಸರ್ಕಾರಿ ಕಂಪನಿಗಳು, ಸ್ಥಳೀಯ ಸಂಸ್ಥೆಗಳು, ಸಹಕಾರಿ ಸೊಸೈಟಿಗಳು ಮುಂತಾದವುಗಳು ಪಡೆದ ಸಾಲದ ಮರುಪಾವತಿಗೆ ರಾಜ್ಯ ಸರ್ಕಾರ ನೀಡಿದ ಖಾತರಿಗಳ ವಿವರಗಳನ್ನು ಹಣಕಾಸು ಲೆಕ್ಕಗಳ ಸಂಪುಟ–IIರ ವಿವರಣಾ ಪಟ್ಟಿ 9ರಲ್ಲಿ ನೀಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ಪ್ರತಿವರ್ಷ ಖಾತರಿ ನೀಡಿದ ಗರಿಷ್ಠ ಮೊತ್ತ ಮತ್ತು ಬಾಕಿ ಇರುವ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷಾಂತ್ಯದಲ್ಲಿ | ಖಾತರಿ ನೀಡಿದ ಗರಿಷ್ಠ ಮೊತ್ತ (ಅಸಲು ಮಾತ್ರ) | 31ನೇ ಮಾರ್ಚ್‌ಗೆ ಬಾಕಿ ಇರುವ ಮೊತ್ತ | |
|---|---|---|---|
| | | ಅಸಲು | ಬಡ್ಡಿ |
| 2009-10 | 18,420 | 6,954 | 249 |
| 2010-11 | 19,150 | 6,448 | 169 |
| 2011-12 | 13,262 | 6,491 | 149 |
| 2012-13 | 14,306 | 6,565 | 123 |
| 2013-14 | 16,145 | 7,671 | 112 |

## 6.4 ಬಾಹ್ಯ ಬೆಂಬಲಿತ ಯೋಜನೆಗಳು

ಬಾಹ್ಯ ಬೆಂಬಲಿತ ಯೋಜನೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮರುಪಾವತಿಯ ಜವಾಬ್ದಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ. ಪ್ರತಿ ಯೋಜನೆಯ ವಿವರಗಳನ್ನು ಹಣಕಾಸು ಲೆಕ್ಕಗಳು–ಸಂಪುಟ–IIರಲ್ಲಿ ಅನುಬಂಧ–Vರಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಅವಧಿ | ಆರಂಭ ಶಿಲ್ಕು | ಸ್ವೀಕರಿಸಿದ ಮೊತ್ತ | ಮರು ಪಾವತಿಸಿದ ಮೊತ್ತ | ಮುಕ್ತಾಯ ಶಿಲ್ಕು |
|---|---|---|---|---|
| 2012-13 | 7,663 | 1,349 | 399 | 8,613 |
| 2013-14 | 8,613 | 1,159 | 410 | 9,362 |

## ಅಧ್ಯಾಯ VII

# ಇತರ ವಿಷಯಗಳು

### 7.1 ಆಂತರಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು

ಸಂವಿಧಾನದ ಅನುಚ್ಛೇದ 293(1) ರಾಜ್ಯ ಸರ್ಕಾರದ ಸಾಲ ಪಡೆಯುವಿಕೆಯನ್ನು ನಿಯಂತ್ರಿಸುತ್ತದೆ. ರಾಜ್ಯ ಸರ್ಕಾರದ ಆಂತರಿಕ ಋಣದ ಶಿಲ್ಕು ₹31,226 ಕೋಟಿಗಳಷ್ಟಿದ್ದು, ಇದರಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ₹123 ಕೋಟಿಗಳ ವ್ಯತಿರಿಕ್ತ ಮತ್ತು XIIIನೇ ವಿತ್ತ ಆಯೋಗದ ಶಿಫಾರಸಿನಂತೆ ಕೇಂದ್ರ ಸರ್ಕಾರದ ಹೊಂದಾಣಿಕೆಯಾಗದೆ ಮನ್ನ ಮಾಡಿದ ಸಾಲಗಳು ₹23.66 ಕೋಟಿಗಳು ಸೇರಿದೆ. ಇವುಗಳು ಪರಿಶೀಲನೆಯಲ್ಲಿವೆ.

### 7.2 ರಾಜ್ಯ ಸರ್ಕಾರದ ನೀಡಿದ ಸಾಲ ಮತ್ತು ಮುಂಗಡಗಳು

2013–14 ರ ಅಂತ್ಯಕ್ಕೆ ರಾಜ್ಯ ಸರ್ಕಾರ ನೀಡಿದ ಒಟ್ಟು ಸಾಲ ಮತ್ತು ಮುಂಗಡಗಳ ಮೊತ್ತವು ₹ 12,729 ಕೋಟಿಗಳಷ್ಟಿತ್ತು. ಈ ಸಾಲ ಮತ್ತು ಮುಂಗಡಗಳನ್ನು ವಿವಿಧ ಸಾಲವರ್ಗಗಳಾದ ಪಂಚಾಯತ್ ರಾಜ್ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಪುರಸಭೆಗಳು, ಗೃಹ ಮಂಡಳಿಗಳು ಮತ್ತು ನಿಗಮಗಳು, ಸರ್ಕಾರಿ ಕಂಪನಿಗಳು ಮತ್ತು ನಿಗಮಗಳು, ಸಹಕಾರಿ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ನೀಡಲಾಗುತ್ತದೆ. 31ನೇ ಮಾರ್ಚ್ 2014ರ ಅಂತ್ಯಕ್ಕೆ ಮರುಪಾವತಿಯ ₹ 109 ಕೋಟಿಗಳ ಅಸಲು ಮತ್ತು ₹ 235 ಕೋಟಿಗಳ ಬಡ್ಡಿಯ ಮೊತ್ತವು ಬಾಕಿ ಉಳಿದಿದ್ದು, ಇದಕ್ಕೆ ಸಂಬಂಧಿಸಿದ ಸಾಲ ಲೆಕ್ಕಗಳನ್ನು ಮಹಾಲೇಖಪಾಲರು ನಿರ್ವಹಿಸಿದ್ದಾರೆ.

### 7.3 ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ

ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ನೀಡಿದ ಸಹಾಯಾನುದಾನಗಳ ಮೊತ್ತವು 2011–12 ರಲ್ಲಿದ್ದ ₹ 23,934 ಕೋಟಿಗಳಿಂದ 2013–14 ರಲ್ಲಿ ₹ 32,611 ಕೋಟಿಗಳಿಗೆ ಏರಿದೆ. ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು, ಗ್ರಾಮ ಪಂಚಾಯತಿಗಳು ಮತ್ತು ಪುರಸಭೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಿದ ಅನುದಾನವು (₹ 25,531 ಕೋಟಿಗಳು) ಪ್ರಸಕ್ತ ಸಾಲಿನಲ್ಲಿ ನೀಡಿದ ಒಟ್ಟು ಅನುದಾನದ ಶೇಕಡ 78ರಷ್ಟಿದೆ. ಕಳೆದ ಮೂರು ವರ್ಷಗಳಲ್ಲಿ ನೀಡಿದ ಸಹಾಯಾನುದಾನದ ವಿವರಗಳು ಕೆಳಕಂಡಂತಿದೆ.

(₹ ಕೋಟಿಗಳಲ್ಲಿ)

| ವರ್ಷ | ಜಿಲ್ಲಾ ಪಂಚಾಯತ್‌ಗಳು | ತಾಲ್ಲೂಕು ಪಂಚಾಯತ್‌ಗಳು | ಗ್ರಾಮ ಪಂಚಾಯತ್‌ಗಳು | ನಗರಸ್ಥಳೀಯ ಸಂಸ್ಥೆಗಳು ಮತ್ತು ಪುರಸಭೆಗಳು | ಇತರೆ | ಒಟ್ಟು |
|---|---|---|---|---|---|---|
| 2011-12 | 5,653 | 8,211 | 1,344 | 4,248 | 4,478 | 23,934 |
| 2012-13 | 6,497 | 10,423 | 1,611 | 4,009 | 4,636 | 27,176 |
| 2013-14 | 7,488 | 11,403 | 1,619 | 5,019 | 7,082 | 32,611 |

* ಇತರೆಯಲ್ಲಿ ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಸೇರಿವೆ.

#### 7.3.1 ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ

ಸರ್ಕಾರವು ವಿವಿಧ ಫಲಾನುಭವಿಗಳಿಗೆ ಸಹಾಯಾನುದಾನಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಸಹಾಯಾನುದಾನದ ಬಳಕೆ ಪ್ರಮಾಣ ಪತ್ರವನ್ನು ಪ್ರಧಾನ ಮಹಾಲೇಖಪಾಲರಿಗೆ ಸಲ್ಲಿಸಲು ಸೂಚಿಸಬಹುದು. ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಬಳಕೆ ಪ್ರಮಾಣ

ಪತ್ರಗಳ ಸಲ್ಲಿಕೆಯನ್ನು ಅಂತಹ ಹಣಬಿಡುಗಡೆಗಳಲ್ಲಿ ಮಾತ್ರ ಗಮನಿಸುತ್ತಾರೆ. 31 ಮಾರ್ಚ್ 2014ರ ಅಂತ್ಯಕ್ಕೆ ₹1,215 ಕೋಟಿಗಳ ಮೊತ್ತದ ಸುಮಾರು 320 ಸಹಾಯಾನುದಾನ ಬಿಲ್ಲುಗಳಲ್ಲಿ ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆಯು ಬಾಕಿ ಉಳಿದಿದೆ.

## 7.4 ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು.

(₹ ಕೋಟಿಗಳಲ್ಲಿ)

| ಭಾಗ | 1-4-2013 ರಲ್ಲಿದ್ದಂತೆ | 31-3-2014 ರಲ್ಲಿದ್ದಂತೆ | ನಿವ್ವಳ ಹೆಚ್ಚಳ(+)/ ಇಳಿಕೆ (–) |
|---|---|---|---|
| **ನಗದು ಶಿಲ್ಕು** * | **68** | **86** | **(+) 18** |
| **ನಗದು ಶಿಲ್ಕಿನಿಂದ ಹೂಡಿಕೆಗಳು** (ಭಾರತ ಸರ್ಕಾರದ ಭದ್ರತೆಗಳು ಮತ್ತು ಟ್ರೆಜರಿ ಬಿಲ್ಲುಗಳಲ್ಲಿ) | **6,872** | **10,973** | **(+) 4,101** |
| **ಇತರೆ ನಗದು ಶಿಲ್ಕು ಮತ್ತು ಹೂಡಿಕೆಗಳು** | **3,571** | **3,571** | **(+) 1,605** |
| (a) ಇಲಾಖಾ ಅಧಿಕಾರಿಗಳ ಬಳಿಯ ನಗದು ಮತ್ತು ಖಾಯಂ ಮುಂಗಡ | 4 | 4 | |
| (b) ಮೀಸಲು ನಿಧಿಗಳ ಹೂಡಿಕೆಗಳು | 3,567 | 3,567 | (+) 1,605 |
| **ಒಟ್ಟು** | **10,511** | **14,630** | **(+) 4,119** |
| ಬಡ್ಡಿ ವಸೂಲಿ | 532 | 459 | (-) 73 |

*ನಗದು ಶಿಲ್ಕು ಸ್ಥಳೀಯ ಇರಸಾಲು ಮತ್ತು ರಿಸರ್ವ್ ಬ್ಯಾಂಕಿನ ಠೇವಣಿಗಳನ್ನು ಒಳಗೊಂಡಿದೆ.

2013-14ರಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ನಗದು ಶಿಲ್ಕಿನ ಹೂಡಿಕೆಗಳ ಮೇಲಿನ ಬಡ್ಡಿಯಲ್ಲಿ ಶೇಕಡ 14ರಷ್ಟು ಇಳಿಕೆಯಾಗಿದೆ.

## 7.5 ಲೆಕ್ಕಗಳ ಹೊಂದಾಣಿಕೆ

ಲೆಕ್ಕಗಳ ನಿಖರತೆ ಮತ್ತು ವಿಶ್ವಸನೀಯತೆಗಳು ಇತರೆ ಅಂಶಗಳೊಂದಿಗೆ ಇಲಾಖೆಗಳಲ್ಲಿ ಲಭ್ಯವಿರುವ ಅಂಕಿಗಳನ್ನು ಪ್ರಧಾನ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಸಂಕಲಿಸಿದ ಲೆಕ್ಕಗಳ ಅಂಕಿಗಳೊಂದಿಗೆ ಸಕಾಲದಲ್ಲಿ ಹೊಂದಾಣಿಕೆ ಮಾಡುವುದನ್ನು ಅವಲಂಬಿಸಿವೆ. ಈ ಕೆಲಸವು ಆಯಾ ಇಲಾಖಾ ಮುಖ್ಯಸ್ಥರುಗಳಿಂದ ನಿರ್ವಹಿಸಲ್ಪಡಬೇಕಾಗಿದೆ. 2013-14ರಲ್ಲಿ ರಾಜ್ಯದ ₹106,136 ಕೋಟಿಗಳ ಒಟ್ಟು ವೆಚ್ಚದಲ್ಲಿ ಕೇವಲ ಶೇಕಡ 59ರಷ್ಟು (₹63,043 ಕೋಟಿಗಳು) ಮಾತ್ರ ಹೊಂದಾಣಿಕೆಯಾಗಿತ್ತು. ಅದೇ ರೀತಿ ₹89,630 ಕೋಟಿಗಳ ಒಟ್ಟು ಸ್ವೀಕೃತಿಯಲ್ಲಿ ಶೇಕಡ 99 ರಷ್ಟು (₹88,741 ಕೋಟಿಗಳು) ಹೊಂದಾಣಿಕೆಯಾಗಿತ್ತು. ಸಾಲ ಮತ್ತು ಮುಂಗಡಗಳ ಸ್ವೀಕೃತಿ ಹಾಗೂ ವೆಚ್ಚಗಳ ಲೆಕ್ಕ ಹೊಂದಾಣಿಕೆಯನ್ನು ಯಾವುದೇ ಇಲಾಖೆಗಳ ಮುಖ್ಯ ನಿಯಂತ್ರಣಾಧಿಕಾರಿಗಳು ಮಾಡಿರುವುದಿಲ್ಲ.

## 7.6 ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ

ರಾಜ್ಯದಲ್ಲಿ 33 ಜಿಲ್ಲಾ ಖಜಾನೆಗಳಿವೆ. 2013-14ನೇ ಸಾಲಿನಲ್ಲಿ 396 ಖಜಾನೆ ಲೆಕ್ಕಗಳನ್ನು ಸ್ವೀಕರಿಸಲಾಗಿತ್ತು. ಖಜಾನೆಗಳ ಲೆಕ್ಕಗಳ ಸಲ್ಲಿಕೆಯಲ್ಲಿ 267 ಸಂದರ್ಭಗಳಲ್ಲಿ 15 ದಿನಗಳವರೆಗಿನ ಹಾಗೂ 4 ಸಂದರ್ಭಗಳಲ್ಲಿ 15 ದಿನಗಳ ಮೇಲ್ಪಟ್ಟು ಒಂದು ತಿಂಗಳ ಒಳಗಿನ ವಿಳಂಬವನ್ನು ಗಮನಿಸಲಾಗಿತ್ತು.

### 7.6.1 ಸರ್ವತ್ರ ಒಳ ಶೀರ್ಷಿಕೆ 800-ಇತರೆ ಸ್ವೀಕೃತಿಗಳು/ಇತರೆ ವೆಚ್ಚಗಳ ಇಲಾಖಾ ಸ್ವೀಕೃತಿಗಳ ಮತ್ತು ವಿತರಣೆಗಳ ವರ್ಗೀಕರಣ

ಸ್ವೀಕೃತಿಗಳ ವಿಭಾಗದಲ್ಲಿ 61 ರಾಜಸ್ವ, ಬಂಡವಾಳ ಮತ್ತು ಸಾಲ ಪ್ರಧಾನ ಶೀರ್ಷಿಕೆಗಳಡಿಯಲ್ಲಿ ₹4,182 ಕೋಟಿಗಳ ಇಲಾಖಾ ಸ್ವೀಕೃತಿಗಳ ಮೊತ್ತವನ್ನು (ಒಟ್ಟು ಸ್ವೀಕೃತಿಗಳ ಶೇಕಡಾ 4.66) ಆಯಾ ಪ್ರಧಾನ ಶೀರ್ಷಿಕೆಗಳಡಿಯಲ್ಲಿ 800-ಇತರೆ ಸ್ವೀಕೃತಿಗಳಡಿಯಲ್ಲಿ ದಾಖಲಿಸಲಾಗಿದೆ. ಅದೇ ರೀತಿ ವೆಚ್ಚಗಳ ವಿಭಾಗದಲ್ಲಿ 63 ರಾಜಸ್ವ, ಬಂಡವಾಳ ಮತ್ತು ಸಾಲ ಲೆಕ್ಕಗಳ ಪ್ರಧಾನ ಶೀರ್ಷಿಕೆಗಳಡಿಯಲ್ಲಿ ₹6,179 ಕೋಟಿಗಳ ಇಲಾಖಾ

ವೆಚ್ಚವನ್ನು (ಒಟ್ಟು ವೆಚ್ಚದ ಶೇಕಡಾ 5.78) 800 ಇತರೆ ವೆಚ್ಚ ಒಳ ಶೀರ್ಷಿಕೆಯಡಿ ದಾಖಲಿಸಲಾಗಿದ್ದು ಇದರ ವಿವರಗಳನ್ನು ಹಣಕಾಸು ಲೆಕ್ಕಗಳು ಸಂಪುಟ I ರಲ್ಲಿ ಲೆಕ್ಕಗಳಿಗೆ ಟಿಪ್ಪಣಿಯ ಅನುಬಂಧ–ಎ ಯಲ್ಲಿ ನೀಡಲಾಗಿದೆ.

### 7.7 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು

'ಸಾದಿಲ್ವಾರು' ವೆಚ್ಚ ಅಥವಾ 'ಸಾದಿಲ್ವಾರುಗಳು' ಒಂದು ಕಛೇರಿಯ ನಿರ್ವಹಣೆಗೆ ಅಗತ್ಯವಾದ ಎಲ್ಲಾ ಪ್ರಾಸಂಗಿಕ ವೆಚ್ಚ ಮತ್ತು ಇತರ ವೆಚ್ಚಗಳು ಅಥವಾ ಇಲಾಖೆಯ ನಿಗದಿತ ವರ್ಗೀಕರಣ ನಿಯಮಗಳ ಹೊರಗಿನ ವೆಚ್ಚ ಶೀರ್ಷಿಕೆಯಡಿ ಬರುವ ತಾಂತ್ರಿಕ ನಿರ್ವಹಣೆಯು ಇಲಾಖಾ ವೆಚ್ಚಗಳನ್ನು ಒಳಗೊಂಡಿದೆ. ಸಾದಿಲ್ವಾರು ವೆಚ್ಚ ಕೈಪಿಡಿ 1958ರ ಕಂಡಿಕೆ 36ರ ಅನ್ವಯ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಸಮರ್ಥನಾ ದಾಖಲೆಗಳು ಇಲ್ಲದೆಯೇ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಹಣ ಸೆಳೆಯುವ ಅಧಿಕಾರವನ್ನು ಹೊಂದಿದ್ದಾರೆ. ಅಂತಹ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಗರಿಷ್ಠ 90 ದಿನಗಳ ಒಳಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು ಸಲ್ಲಿಸುವ ಮೂಲಕ ಇತ್ಯರ್ಥ ಮಾಡಬೇಕಾಗಿದೆ. 31 ಮಾರ್ಚ್ 2014 ರ ಅಂತ್ಯಕ್ಕೆ ₹ 190 ಕೋಟಿಗಳನ್ನು ಒಳಗೊಂಡ ಸುಮಾರು 9,488 ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು, ಸವಿವರ ಸಾದಿಲ್ವಾರು ಬಿಲ್ಲುಗಳ ಸಲ್ಲಿಕೆಯಾಗದೆ ಬಾಕಿ ಉಳಿದಿವೆ.

### 7.8 ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು

ಲೋಕೋಪಯೋಗಿ ಕಾಮಗಾರಿಗಳ ಇಲಾಖೆ, ಜಲಸಂಪನ್ಮೂಲ ಇಲಾಖೆ ಮತ್ತು ಜನಾರೋಗ್ಯ ಮತ್ತು ಇಂಜಿನೀಯರಿಂಗ್ ಇಲಾಖೆಗಳು ಕೈಗೊಂಡ ವಿವಿಧ ನಿರ್ಮಾಣ ಕಾಮಗಾರಿಗಳ ಮೇಲೆ ರಾಜ್ಯ ಸರ್ಕಾರವು 2013–14ರವರೆಗೆ ಒಟ್ಟು ₹ 94,806 ಕೋಟಿಗಳ ವೆಚ್ಚವನ್ನು ಮಾಡಿದೆ. ಆದರೆ ಈ ನಿರ್ಮಾಣ ಯೋಜನೆಗಳಲ್ಲಿ ತೊಡಗಿರುವ ಇಲಾಖೆಗಳು, 2013–14ರ ಅಂತ್ಯಕ್ಕೆ ₹ 1,059 ಕೋಟಿಗಳ ಅಂದಾಜಿನ 1,342 ಕಾಮಗಾರಿಗಳು ಅಪೂರ್ಣವಾಗಿ ಉಳಿದಿದ್ದು ಇವುಗಳ ಮೇಲೆ ₹ 2,252 ಕೋಟಿಗಳ ಸರ್ಕಾರದ ಬದ್ಧತೆಗಳನ್ನು ವರದಿ ಮಾಡಿವೆ. ವಿವರ ಕೆಳಗಿನಂತಿವೆ.

(₹ ಕೋಟಿಗಳಲ್ಲಿ)

| ಅವಧಿ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಅಂದಾಜು | ತಹಲ್ ವರೆಗಿನ ವೆಚ್ಚ |
|---|---|---|---|
| 1995-2000 | 2 | 5 | 2 |
| 2000-2005 | 4 | 3 | 3 |
| 2005-2010 | 102 | 287 | 163 |
| 2010-2014 | 1234 | 1957 | 891 |
| **ಒಟ್ಟು** | **1342** | **2252** | **1059** |